# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಜೂನ್ 25, 2022

ಸಂಪುಟ : 49 ಸಂಚಿಕೆ : 42 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ವಾಯುಪಡೆಗೆ ಅಗ್ನಿಪಥ ನೇಮಕ ಆರಂಭ

ನವದೆಹಲಿ, ಜೂ. 24 - ಭಾರತೀಯ ವಾಯುಪಡೆಗೆ ಅಗ್ನಿಪಥ ಯೋಜನೆಯ ಮೂಲಕ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ಜೂನ್ 14ರಂದು ಅಗ್ನಿಪಥ ಯೋಜನೆಯನ್ನು ಕೇಂದ್ರ ಸರ್ಕಾರ ಪ್ರಕಟಿಸಿತ್ತು.

ವಾಯುಪಡೆಯಷ್ಟೇ ಅಲ್ಲದೇ ಸೈನ್ಯದ ಎಲ್ಲಾ ಮೂರು ಅಂಗಗಳು ಅಗ್ನಿಪಥ ಯೋಜನೆಯನ್ನು ಜಾರಿಗೆ ತರಲಿವೆ. ಈ ಯೋಜನೆಯ ಅನ್ವಯ ಸೈನಿಕರು ನಾಲ್ಕು ವರ್ಷಗಳ ಅವಧಿಗೆ ನೇಮಕ ಗೊಳ್ಳಲಿದ್ದಾರೆ. ಇವರಲ್ಲಿ ಶೇ.25ರಷ್ಟು ಜನರನ್ನು ದೀರ್ಘಾವಧಿಗೆ ನೇಮಿಸಿಕೊಳ್ಳಲಾಗುವುದು.

## 130 ಕ್ಷೇತ್ರಗಳಿಗೆ ಹೆಚ್ಚು ಗಮನ : ಡಿಕೆಶಿ



ಬೆಂಗಳೂರು, ಜೂ. 24 - ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಹವಣಿಸುತ್ತಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 130 ಕ್ಷೇತ್ರಗಳಿಗೆ ಹೆಚ್ಚು ಗಮನ ನೀಡಲು ಒಲವು ತೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸಹೋದರ ಸಂಸದ ಡಿ.ಕೆ. ಸುರೇಶ್ ಈಗಿನಿಂದಲೇ ಅಭ್ಯರ್ಥಿಗಳ (2ನೇ ಪುಟಕ್ಕೆ)

## ಪಾಕ್ : ದಿವಾಳಿ ತಡೆಗೆ ಶ್ರೀಮಂತರ ಮೇಲೆ ತೆರಿಗೆ

ಇಸ್ಲಮಾಬಾದ್, ಜೂ. 24 - ಪಾಕಿಸ್ತಾನ ದಿವಾಳಿಯಾಗುವುದನ್ನು ತಡೆಯಲು ಅತಿ ಶ್ರೀಮಂತರ ಮೇಲೆ ಶೇ.10ರ ತೆರಿಗೆ ಹೇರುವುದಾಗಿ ಪಾಕಿಸ್ತಾನದ ಪ್ರಧಾನ ಮಂತ್ರಿ ಶೆಬಾಜ್ ಷರೀಫ್ ಹೇಳಿದ್ದಾರೆ. ಅತಿ ಶ್ರೀಮಂತರ ಮೇಲೆ ಬಡತನ ನಿವಾರಣಾ ತೆರಿಗೆ ಹೇರಲಾಗುವುದು. ಜನ ಸಮೂಹಕ್ಕೆ ನೆರವಾಗುವುದು ಹಾಗೂ ಹಣದುಬ್ಬರದಿಂದ ಆಗಿರುವ (4ನೇ ಪುಟಕ್ಕೆ)

# ಮೋದಿ ನಿಷ್ಕಳಂಕ

## ಗುಜರಾತ್ ಗಲಭೆ : ಎಸ್ಐಟಿ ವರದಿ ಎತ್ತಿ ಹಿಡಿದ ಸುಪ್ರೀಂ

ನವದೆಹಲಿ, ಜೂ. 24 - ಗುಜರಾತ್ ಗಲಭೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಯಾವುದೇ ಪಾತ್ರ ಹೊಂದಿಲ್ಲ ಎಂದು ವಿಶೇಷ ತನಿಖಾ ತಂಡ (ಎಸ್.ಐ.ಟಿ.) ನೀಡಿದ ವರದಿಯನ್ನು ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟ್, ಕೆಲ ಅಧಿಕಾರಿಗಳ ವೈಫಲ್ಯವನ್ನೇ ಸರ್ಕಾರದ ಸಂಚು ಎನ್ನಲಾಗದು ಎಂದು ತಿಳಿಸಿದೆ.



2002ರ ಗಲಭೆಗೆ ಸಂಬಂಧಿಸಿದಂತೆ ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಮೋದಿ ಹಾಗೂ ಇತರೆ 63 ಜನರಿಗೆ ಕ್ಲೀನ್‌ಚಿಟ್ ನೀಡಿ ಎಸ್.ಐ.ಟಿ. 2012ರಲ್ಲಿ ವರದಿ ಸಲ್ಲಿಸಿತ್ತು. ಕಾಂಗ್ರೆಸ್ ನಾಯಕ ಎಹಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಅವರು ಕ್ಲೀನ್‌ಚಿಟ್ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ (3ನೇ ಪುಟಕ್ಕೆ)

## ಅತೃಪ್ತರಿಂದ ಸುಳ್ಳು ಆರೋಪ

### ಕ್ರಮ ತೆಗೆದುಕೊಳ್ಳಬೇಕೆಂದ ಸುಪ್ರೀಂ ಕೋರ್ಟ್

ನವದೆಹಲಿ, ಜೂ. 24 - ಗುಜರಾತ್ ಗಲಭೆಗಳಿಗೆ ಸಂಬಂಧಿಸಿದಂತೆ ಸಂಚಲನೆ ಸೃಷ್ಟಿಸಲು ಸುಳ್ಳು ಆರೋಪ ಮಾಡಿದ ಅತೃಪ್ತ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಗುಜರಾತ್ ಗಲಭೆಗಳಿಗೆ ಸಂಬಂಧಿಸಿದಂತೆ ಎಸ್.ಐ.ಟಿ. ರೂಪಿಸಿರುವ ವರದಿ ಎತ್ತಿ ಹಿಡಿಯುವ ಆದೇಶದಲ್ಲಿ ನ್ಯಾಯಾಲಯ ಈ ಟಿಪ್ಪಣಿ ಮಾಡಿದೆ.


ಆಗ ಐಪಿಎಸ್ ಅಧಿಕಾರಿಯಾಗಿದ್ದ ಸಂಜೀವ್ ಭಟ್, ಮಾಜಿ ಗೃಹ ಸಚಿವ ಹರೇನ್ ಪಾಂಡ್ಯ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಆರ್.ಬಿ. ಶ್ರೀಕುಮಾರ್ ಅವರು ಸುಳ್ಳುಗಳಿಂದ ಗಲಭೆಯ ವಿಷಯವನ್ನು ಸಂಚಲನಾತ್ಮಕ ಹಾಗೂ ರಾಜಕೀಯಗೊಳಿಸಿದ್ದಾರೆ ಎಂದು ನ್ಯಾಯಾಲಯ ಹೇಳಿದೆ. ಮಾರ್ಚ್ 26, 2003ರಂದು (2ನೇ ಪುಟಕ್ಕೆ)

# ಕೈಗಾರಿಕಾ ವಸಾಹತಿಗೆ ಸೌಲಭ್ಯಗಳ ಸಮಸ್ಯೆ

## ಒಳಚರಂಡಿ, ಸ್ವಚ್ಛತೆ, ಕಸ ವಿಲೇವಾರಿ ಸಮಸ್ಯೆ ಬಗೆಹರಿಸಲು ಒತ್ತಾಯ

ದಾವಣಗೆರೆ, ಜೂ. 24 - ಸರ್ಕಾರದ ಬೊಕ್ಕಸಕ್ಕೆ ತಿಂಗಳಿಗೆ ಕೋಟ್ಯಂತರ ಆದಾಯ ಕೊಡುವ ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್, ಒಳಚರಂಡಿ, ರಸ್ತೆ ಸ್ವಚ್ಛತೆ, ಮಳೆ ನೀರಿನ ಚರಂಡಿ, ಸ್ವಚ್ಛತೆ ಹಾಗೂ ಕಸ ವಿಲೇವಾರಿಯ ಸಮಸ್ಯೆ ಎದುರಿಸುತ್ತಿದೆ.

ದೇಶ - ವಿದೇಶಗಳಿಗೆ ತೆರಳಿ ಅಲ್ಲಿನ ಉದ್ಯಮಿಗಳು ಬರಲು ಕೆಂಪು ಹಾಸು ಹಾಸುವ ಸರ್ಕಾರ, ಸ್ಥಳೀಯ ಸಣ್ಣ ಕೈಗಾರಿಕೆಗಳು ಕಳೆದ ಎರಡು ವರ್ಷಗಳಿಂದ ಹಲವು ಬಾರಿ ಮನವಿ ಮಾಡಿಕೊಂಡರೂ ಸೌಲಭ್ಯ ಕಲ್ಪಿಸಲು ಮನಸ್ಸು ಮಾಡುತ್ತಿಲ್ಲ ಎಂದು ಉದ್ಯಮಿಗಳು ವಿಷಾದಿಸಿದ್ದಾರೆ.



2003ರಲ್ಲಿ ಆಗಿನ ದಾವಣಗೆರೆ ನಗರಸಭೆಗೆ ಕೈಗಾರಿಕಾ ವಸಾಹತುವನ್ನು ಹಸ್ತಾಂತರಿಸಲಾಗಿತ್ತು. ಇದಾಗಿ 19 ವರ್ಷ ಉರುಳಿದೆ, ನಗರಸಭೆಯು ಪಾಲಿಕೆಯಾಗಿದೆ. ಆದರೆ, ಕೈಗಾರಿಕಾ ವಸಾಹತುವಿನ ಬಗ್ಗೆ ಕಾಳಜಿ ವಹಿಸಿಲ್ಲ ಎಂದು ಉದ್ಯಮಿಗಳು ದೂರಿದ್ದಾರೆ.

ಅದರಲ್ಲೂ ಒಳಚರಂಡಿ ನಿರ್ಮಿಸಿ ನಾಲ್ಕು ದಶಕಗಳೇ ಆಗಿವೆ. ಈ ಅವಧಿಯಲ್ಲಿ ಒಳಚರಂಡಿ ಶಿಥಿಲವಾಗಿದ್ದು, ಹಲವೆಡೆ ಒಡೆಯುತ್ತಿದೆ. (2ನೇ ಪುಟಕ್ಕೆ)

## ಕಾವಲಹಳ್ಳಿ ಗ್ರಾಮದ ಕಡಕೊಳ್ಳದ ವಾಮದೇವಪ್ಪ ನಿಧನ



ಹರಪನಹಳ್ಳಿ ತಾ. ಕಾವಲಹಳ್ಳಿ ಗ್ರಾಮದ ಲಿಂ. ಕೆ. ಕೆಂಚಪ್ಪ ಇವರ ಮಗ

**ಶ್ರೀ ಕೆ. ವಾಮದೇವಪ್ಪನವರು** (68 ವರ್ಷ) ಇವರು

ದಿ. 24.06.2022ನೇ ಶುಕ್ರವಾರ ಬೆಳಿಗ್ಗೆ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಸಹೋದರರು ಹಾಗೂ ಮಕ್ಕಳು ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ : 25.06.2022ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಕಾವಲಹಳ್ಳಿ ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರುವುದು.

ಇಂತಿ ದುಃಖತಪ್ತರು :

**ಶ್ರೀ ಕೆ. ಗುರುಬಸಪ್ಪ ಮತ್ತು ಸಹೋದರರು ಮತ್ತು**
**ಮೃತರ ಧರ್ಮಪತ್ನಿ : ಶ್ರೀಮತಿ ಮಲ್ಲಮ್ಮ ಮತ್ತು ಮಕ್ಕಳು**

94839 82039

## ದಾವಣಗೆರೆ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘ (ರಿ.)


ದಿನಾಂಕ : 25.06.2022 ಶನಿವಾರ ನಡೆಯಲಿರುವ

### ಆಡಳಿತ ಮಂಡಳಿ ಚುನಾವಣೆ-2022-2025

ಮಾನ್ಯ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸದಸ್ಯರಲ್ಲಿ ವಿನಂತಿ

ದಿನಾಂಕ : 25.06.2022 ರಂದು ನಡೆಯಲಿರುವ ದಾವಣಗೆರೆ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಚುನಾವಣೆಗೆ, **ಮಾನ್ಯ ಡಾ|| ವೀರಯ್ಯ ಹೆಚ್.ಎಂ.** ಇವರ ನೇತೃತ್ವದಲ್ಲಿ ಈ ಕೆಳಕಂಡ ನಾವುಗಳು ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ಪ್ರಯುಕ್ತ ತಾವುಗಳು ನಮ್ಮೆಲ್ಲರಿಗೂ (13 ಅಭ್ಯರ್ಥಿಗಳಿಗೂ) ಮತವನ್ನು ನೀಡುವುದರ ಮುಖಾಂತರ ನಮ್ಮನ್ನು ಜಯಶೀಲರನ್ನಾಗಿ ಮಾಡಬೇಕೆಂದು ಹಾಗೂ ಪ್ರಸ್ತುತ ಆಡಳಿತದಲ್ಲಿ ಬದಲಾವಣೆ ತರಬೇಕೆಂದು ಈ ಮೂಲಕ ನಾವೆಲ್ಲರೂ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

(ಪ್ರತಿಯೊಬ್ಬರು 13 ಮತಗಳನ್ನು ಚಲಾಯಿಸಬಹುದು).

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಕ್ರ.ಸಂ. | ಅಭ್ಯರ್ಥಿಯ ಹೆಸರು |
|---|---|---|---|
| 2 |  ಕಲ್ಲಪ್ಪ ಸಿ.ಜಿ.<br>ನಿ. ಖಜಾನೆ ಅಧಿಕಾರಿ<br>ಮೊ. : 99725 12991 | 19 |  ಮೋಹನ್‌ಕುಮಾರ್ ಜೆ.ಆರ್.<br>ನಿ. ಪ್ರಾಚಾರ್ಯರು<br>ಮೊ. :94485 66093 |
| 3 |  ಕೃಷ್ಣಮೂರ್ತಿ ಎಂ.<br>ನಿ. ಔಷಧಿ ವಿತರಕರು<br>ಮೊ. : 94490 64509 | 22 |  ರೇಣುಕಾಮೂರ್ತಿ ಬಿ.ಕೆ.<br>ನಿ. ನೌಕರರು, PWD ಇಲಾಖೆ<br>ಮೊ. : 94486 42444 |
| 4 |  ಗಡ್ಡದಗೂಳಿ ಬಿ.ಎಂ.<br>(ಬಸವರಾಜ್ ಎಂ. ಗಡ್ಡದಗೂಳಿ)<br>ನಿ.ಸ. ಸಂಖ್ಯಾ ಅಧಿಕಾರಿ, 94841 65929 | 24 |  ವೀರಯ್ಯ ಎಸ್.ಎಂ.<br>ನಿ.ಪ್ರಾಚಾರ್ಯರು<br>ಮೊ. : 94482 12911 |
| 6 |  ಗುರುಸ್ವಾಮಿ ಯು.<br>ನಿ. ಪ್ರಾಚಾರ್ಯರು<br>ಮೊ. : 99720 66772 | 25 |  ಡಾ|| ವೀರಯ್ಯ ಹೆಚ್.ಎಂ.<br>ನಿ. ಹಿರಿಯ ತಜ್ಞ ವೈದ್ಯರು<br>ಮೊ. : 94487 22117 |
| 7 |  ತಿಪ್ಪೇಸ್ವಾಮಿ ಎ.ಡಿ.<br>ನಿ. ಸಹಾಯಕ ಕಾರ್ಯಪಾಲಕ ಅಭಿಯಂತರರು.<br>ಮೊ. : 94489 30116 | 26 |  ಸಿದ್ದಪ್ಪ ಜಿ.ಸಿ.<br>ನಿ. ಕೃಷಿ ಅಧಿಕಾರಿ<br>ಮೊ. : 94804 41581 |
| 9 |  ದೇವೇಂದ್ರಪ್ಪ ಕೆ.<br>ನಿ. ಪ್ರಾಚಾರ್ಯರು<br>ಮೊ. : 94483 93312 | 27 |  ಸುಧಾಕರ್ ಎನ್.ಕೆ.<br>ನಿ. ಸಹಾಯಕ ಕೃಷಿ ನಿರ್ದೇಶಕರು<br>ಮೊ. : 94492 50565 |
| 15 |  ಮರಿಗೌಡ್ರು ಎನ್.ಎನ್.<br>ನಿ. ಪ್ರಾಚಾರ್ಯರು<br>ಮೊ. : 94488 12663 | | ದಿನಾಂಕ : 25.06.2022, ಶನಿವಾರ<br>ಸಮಯ : ಬೆಳಿಗ್ಗೆ 8.00 ರಿಂದ ಸಂಜೆ 4.00ರ ವರೆಗೆ<br>ಸ್ಥಳ : ಕುವೆಂಪು ಕನ್ನಡ ಭವನ<br>ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆ. |

ತಮ್ಮಲ್ಲಿ ಗುರುತಿನ ಚೀಟಿ ಇಲ್ಲದಿದ್ದಲ್ಲಿ 1 ಫೋಟೋ ಜೊತೆಗೆ ಸಂಘದ ಕಛೇರಿಯಲ್ಲಿ ಪಡೆದುಕೊಳ್ಳಿ




neelkanth
JEWELLERS

ನೀಲಕಂಠ
ಜ್ಯುವೆಲ್ಲರ್ಸ್
ಸುವರ್ಣ ಸಮೃದ್ಧಿ
ಆಭರಣ ಪ್ರದರ್ಶನ ಮತ್ತು ಮಾರಾಟ

ಅತ್ಯಾಕರ್ಷಕವಾದ ವಿನ್ಯಾಸ ಮತ್ತು ಅದ್ಭುತ ಶೈಲಿಯ ಆಭರಣಗಳ ಜಗತ್ತಿಗೆ ನಿಮಗೆ ಸ್ವಾಗತ.

ವಿಶಾಲ ವೈವಿಧ್ಯತೆಯ ಹಾಗೂ ವಿನ್ಯಾಸದ ಚಿನ್ನ, ವಜ್ರ, ಪ್ಲಾಟಿನಂ ಮತ್ತು ಬೆಳ್ಳಿ ವಸ್ತುಗಳು.

ದಿನಾಂಕ
24, 25, ಮತ್ತು 26ನೇ
ಜೂನ್, 2022

ಸ್ಥಳ
ಹೊಟೇಲ್ ಸದರ್ನ್ ಸ್ಟಾರ್
ದಾವಣಗೆರೆ

ವಿಚಾರಣೆಗಾಗಿ ಸಂಪರ್ಕಿಸಿ: 96063 33525 / 73497 71486

www.neelkanthbengaluru.com

# ನಗರದ ದವನ ಕಾಲೇಜಿನ ವಿದ್ಯಾರ್ಥಿಗಳಿಂದ ಬೀದಿ ನಾಟಕ



ದಾವಣಗೆರೆ, ಜೂ.24- ಸ್ಫೂರ್ತಿ ಯುವಜನೋತ್ಸವ 2022ರ ಅಂಗವಾಗಿ ನಗರದ ದವನ್ ಪದವಿ ಕಾಲೇಜಿನ ಪ್ರಥಮ ಬಿಬಿಎ ವಿದ್ಯಾರ್ಥಿಗಳು ನಗರದ ಕಾಯಿಪೇಟೆಯ ಶ್ರೀ ಬಸವೇಶ್ವರ ವೃತ್ತದಲ್ಲಿ ಪುರುಷರ ಮೇಲೆ ಮಹಿಳೆಯರ ಅನಗತ್ಯ ಕಿರುಕುಳ ಕುರಿತು ಬೀದಿ ನಾಟಕವನ್ನು ನಿನ್ನೆ ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ದವನ್ ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್, ನಿರ್ದೇಶಕರಾದ ಹರ್ಷರಾಜ್ ಗುಜ್ಜರ್, ತರಗತಿ ಉಸ್ತುವಾರಿ ಉಪನ್ಯಾಸಕರಾದ ಕೆ. ಕೊಟ್ರಪ್ಪ, ಸ್ಪರ್ಧೆಯ ಉಸ್ತುವಾರಿ ಅರುಣ್ ಚೌಹಾಣ್, ವಿದ್ಯಾರ್ಥಿಗಳಾದ ಅರ್ಪಿತ, ಜ್ಯೋತಿ, ಕೃತಿ, ಅಭಿಜಿತ್, ಕಶೀಷ್, ಕವನ, ನಿತ್ಯ, ಕರಿಷ್ಮಾ, ರಿಷಿ, ನೇಹಾ ಉಪಸ್ಥಿತರಿದ್ದರು.

# ಜಲಜೀವನ ಮಿಷನ್ ಯೋಜನೆಯಡಿಯಲ್ಲಿ ಮನೆ-ಮನೆಗೆ ನಳ ಸಂಪರ್ಕ: ಕರುಣಾಕರ ರೆಡ್ಡಿ

ಹರಪನಹಳ್ಳಿ, ಜೂ. 24- ಗ್ರಾಮೀಣ ಭಾಗದ ಜನರ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಸರ್ಕಾರ ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಪ್ರತಿ ಮನೆ ಮನೆಗೂ ನಳಗಳನ್ನು ಜೋಡಿಸುವ ಮೂಲಕ ಕುಡಿಯುವ ನೀರು ಒದಗಿಸುವ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.




ತಾಲ್ಲೂಕಿನ ಕೂಲಹಳ್ಳಿ ಗ್ರಾಮದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಇಲಾಖೆಯಿಂದ ಅಂದಾಜು 1.22 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ಜೆಜೆಎಂ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗ ದಲ್ಲಿ ಜಲಜೀವನ ಮಿಷನ್ ಯೋಜನೆಯ ಮೂಲಕ ಮನೆ ಮನೆಗೆ ನಳ ಸಂಪರ್ಕ ಕಲ್ಪಿಸುವ ಯೋಜನೆ ಇದಾಗಿದ್ದು, ಈ ಯೋಜನೆಯ ಕಾಮಗಾರಿಗಳು ಗುಣಮಟ್ಟದ್ದಾಗಿರಬೇಕು ಮತ್ತು ದೀರ್ಘಕಾಲ ಬಾಳಿಕೆ ಬರುವಂತಾಗಬೇಕು ಎಂದು ಇಂಜಿನಿಯರ್‌ಗೆ ಸೂಚಿಸಿದರು.

ಕೂಲಹಳ್ಳಿಯಲ್ಲಿರುವ ಯಾತ್ರಿ ನಿವಾಸ ಭವನ ಪಾಳು ಬಿದ್ದಿದ್ದು, ಇದನ್ನು ನಮ್ಮ ದೇವಸ್ಥಾನದ ಕಮಿಟಿಗೆ ಹಸ್ತಾಂತರ ಮಾಡಿಕೊಡಿ ಎಂದು ಕೂಲಹಳ್ಳಿ ಸಂಸ್ಥಾನ ಮಠದ ಪಟ್ಟದ ಚಿನ್ಮಯಿ ಸ್ವಾಮೀಜಿಯವರು ಶಾಸಕರಲ್ಲಿ ಮನವಿ ಮಾಡಿದರು. ಆಗ ಶಾಸಕರು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿ ಜೊತೆ ಮಾತನಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಕೂಲಹಳ್ಳಿ ಗ್ರಾ.ಪಂ. ಅಧ್ಯಕ್ಷ ಮಂಜುನಾಥ್, ಎಇಇ ಸಿದ್ದರಾಜು, ತಾಲ್ಲೂಕು ಬಿಜೆಪಿ ಎಸ್.ಟಿ. ಮೋರ್ಚಾ ಅಧ್ಯಕ್ಷ ಮನೋಜ್ ತಳವಾರ್, ಮುಖಂಡರಾದ ಆರ್. ಲೋಕೇಶ್, ಕಲ್ಲೇರ್ ಬಸವರಾಜಪ್ಪ, ಎಂ. ಮಲ್ಲೇಶ್, ವಕೀಲರಾದ ಕೆಂಗಳ್ಳಿ ಪ್ರಕಾಶ್, ಮುತ್ತಿಗಿ ರೇವಣಸಿದ್ದಪ್ಪ, ಪುರಸಭೆ ಸದಸ್ಯ ದ್ಯಾಮಜ್ಜಿ ರೊಕ್ಕಪ್ಪ, ಶಿರಗಾನಹಳ್ಳಿ ವಿಶ್ವನಾಥ್, ವಿಷ್ಣುವರ್ಧನ್ ರೆಡ್ಡಿ, ಹೇಮಂತ್, ಬಸವರಾಜ್ ಅಂಬಳ್ಳಿ, ಪಿ. ಕೊಟ್ರೇಶಪ್ಪ, ಗೋಣೆಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲಿ ಶಿಶುಪಾಲನಾ ಕೇಂದ್ರ

ದಾವಣಗೆರೆ, ಜೂ.24-ನಗರದ ಮಹಿಳಾ ಉದ್ಯೋಗಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲಿ ಶಿಶುಪಾಲನಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

ಜಿಲ್ಲಾ ಪಂಚಾಯತ್ ಕಚೇರಿಯ ಸುತ್ತಮುತ್ತಲಿನ ವಿವಿಧ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ಅರೆಸರ್ಕಾರಿ/ಹೊರಗುತ್ತಿಗೆ ಹಾಗೂ ಖಾಸಗಿ ಸಂಸ್ಥೆಗಳ ಮಹಿಳಾ ಉದ್ಯೋಗಿಗಳು ತಮ್ಮ 6 ತಿಂಗಳಿಂದ 6 ವರ್ಷದ ಮಕ್ಕಳನ್ನು ಶಿಶುಪಾಲನಾ ಕೇಂದ್ರಕ್ಕೆ ದಾಖಲು ಮಾಡಬಹುದು.

ಬೆಳಗ್ಗೆ 9.30 ರಿಂದ ಸಂಜೆ 6ರ ವರೆಗೆ ಕಛೇರಿ ಕೆಲಸದ ಅವಧಿಗೆ ಅನುಗುಣವಾಗುವಂತೆ ಕಾರ್ಯ ನಿರ್ವಹಿಸಲಿದ್ದು, ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ ಹಾಗೂ ಆರೋಗ್ಯದ ಸ್ಥಿತಿ ಸುಧಾರಿಸುವುದು, ಮಕ್ಕಳ ಉತ್ತಮ ಭವಿಷ್ಯ ರೂಪಿಸಲು, ಮಕ್ಕಳ ದೈಹಿಕ, ಸಾಮಾಜಿಕ ಹಾಗೂ ಭಾವನಾತ್ಮಕ ಬೆಳವಣಿಗೆಯನ್ನು ಉತ್ತೇಜಿಸುವುದು ಶಿಶುಪಾಲನಾ ಕೇಂದ್ರದ ಮುಖ್ಯ ಉದ್ದೇಶವಾಗಿರುತ್ತದೆ.

ಶಿಶುಪಾಲನಾ ಕೇಂದ್ರದಲ್ಲಿ ಮಕ್ಕಳಿಗೆ ಅಗತ್ಯವಿರುವ ತೊಟ್ಟಿಲು ಸೌಲಭ್ಯ, ಪೋಷಕಾಂಶ ಒಳಗೊಂಡ ಆಹಾರ ವಿತರಣೆ, ಮಕ್ಕಳ ಸುರಕ್ಷತೆ ಮತ್ತು ಆರೋಗ್ಯ ಸುಧಾರಣೆ, ರಕ್ಷಣೆಗಾಗಿ ಆರೋಗ್ಯ ತಪಾಸಣೆ ಮತ್ತು ಔಷಧಿಗಳ ಕಿಟ್‌ನ ಮೂಲಭೂತ ಸೌಕರ್ಯಗಳು ಲಭ್ಯವಿದೆ ಎಂದು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಹರಿಹರದಲ್ಲಿ ನಾಳೆ ಸೈಕಲ್ ಜಾಥಾ

ಹರಿಹರ,ಜೂ.24- ನಗರದ ಹೈಸ್ಕೂಲ್ ಬಡಾವಣೆ ಕಾಳಿದಾಸ ವಿದ್ಯಾಸಂಸ್ಥೆ ಆವರಣದಲ್ಲಿ ನಾಡಿದ್ದು ದಿನಾಂಕ 26ರ ಭಾನುವಾರ ಬೆಳಿಗ್ಗೆ 11ಕ್ಕೆ ಕಾರ್ಮಿಕ ಮುಖಂಡ ಹೆಚ್.ಕೆ.ಕೊಟ್ರಪ್ಪ ಸ್ನೇಹ ಬಳಗ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ 'ವಿಶ್ವ ಸೈಕಲ್' ದಿನಾಚರಣೆ ಅಂಗವಾಗಿ ಸೈಕಲ್ ಬಳಕೆ ಸುವರ್ಣ ಮಹೋತ್ಸವ ಹಾಗೂ ಸೈಕಲ್ ಜಾಥಾ ಆಯೋಜಿಸಿದೆ.

# ಅತೃಪ್ತರಿಂದ ಸುಳ್ಳು ಆರೋಪ

**(1ನೇ ಪುಟದಿಂದ)** ಅಹಮದಾಬಾದ್‌ನ ಲಾ ಗಾರ್ಡನ್ ನಲ್ಲಿ ಪಾಂಡ್ಯರನ್ನು ಗುಂಡಿಟ್ಟು ಹತ್ಯೆಗೈಯ್ಯಲಾಗಿತ್ತು.

ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರು ಸಭೆಯೊಂದರಲ್ಲಿ ನೀಡಿದ ಹೇಳಿಕೆಗಳಿಗೆ ನಾವು ಪ್ರತ್ಯಕ್ಷ ದರ್ಶಿಗಳು ಎಂದು ಭಟ್ ಹಾಗೂ ಪಾಂಡ್ಯ ಸುಳ್ಳು ಹೇಳಿಕೆ ನೀಡಿದ್ದರು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಗುಜರಾತ್‌ನ ಅತೃಪ್ತ ಅಧಿಕಾರಿಗಳು ಹಾಗೂ ಇತರರು ಸುಳ್ಳಿನ ಮೂಲಕ ಸಂಚಲನೆ ಸೃಷ್ಟಿಸಿದ್ದರು. ಅವರ ಸುಳ್ಳು ಹೇಳಿಕೆಗಳನ್ನು ಎಸ್.ಐ.ಟಿ. ಸಮಗ್ರ ತನಿಖೆಯಿಂದ ಬಯಲಿಗೆ ಎಳೆದಿದೆ ಎಂದು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠ ಹೇಳಿದೆ. ಗುಜರಾತ್ ಗಲಭೆಯಲ್ಲಿ ಮೋದಿ ಹಾಗೂ ಇತರೆ 63 ಸಂಚು ನಡೆಸಿಲ್ಲ ಎಂದು ಕಾಂಗ್ರೆಸ್ ನಾಯಕ ಎಹಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಅವರು ಕ್ಲೀನ್‌ಚಿಟ್ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ತನಿಖಾ ಪ್ರಕ್ರಿಯೆಯಲ್ಲಿ ಭಾಗಿಯಾದ ಪ್ರತಿಯೊಂದು ಸಂಸ್ಥೆಯ ಪ್ರಾಮಾಣಿಕತೆಯನ್ನು ಜಾಕಿಯಾ ಜಾಫ್ರಿ ಅವರು ಹದಿನಾರು ವರ್ಷಗಳಿಂದ ಪ್ರಶ್ನಿಸುತ್ತಲೇ ಬಂದಿದ್ದಾರೆ. ವಾಮ ಮಾರ್ಗದ ಮೂಲಕ ಹಾಗೂ ದುರುದ್ದೇಶದಿಂದ ವಿಷಯ ಪ್ರಚಲಿತವಾಗಿರುವಂತೆ ನೋಡಿಕೊಂಡಿದ್ದಾರೆ ಎಂದೂ ನ್ಯಾಯಾಲಯ ಹೇಳಿದೆ.

ಆಗಿನ ಮುಖ್ಯಮಂತ್ರಿ ಪಾಲ್ಗೊಂಡಿದ್ದ ಸಭೆಯಲ್ಲಿ ಇಲ್ಲದವರು ನಾವು ಪ್ರತ್ಯಕ್ಷದರ್ಶಿಗಳು ಎಂದು ಸುಳ್ಳು ಹೇಳಿಕೆ ನೀಡಿದ್ದಾರೆ. ದೊಡ್ಡ ಹಂತದಲ್ಲಿ ಸಂಚು ನಡೆದಿದೆ ಎಂದು ಅವರು ಹೇಳಿದ ಸುಳ್ಳುಗಳು ಎಸ್.ಐ.ಟಿ. ತನಿಖೆಯಿಂದ ಮಣ್ಣಿನ ಗೂಡಿನಂತೆ ಕುಸಿದಿದೆ ಎಂದು ನ್ಯಾಯಾಲಯ ಹೇಳಿದೆ.

ಆಗಿನ ಮುಖ್ಯಮಂತ್ರಿ ಅಧಿಕೃತ ಸಭೆಯೊಂದರಲ್ಲಿ ಹೇಳಿಕೆ ನೀಡಿದ್ದರು ಎಂದು ಸಂಜೀವ್ ಭಟ್ ಹಾಗೂ ಹರೇನ್ ಪಾಂಡ್ಯ ಅವರು ಸುಳ್ಳು ಹೇಳಿಕೆ ನೀಡಿದ ಕಾರಣದಿಂದಲೇ ಅತಿ ಹೆಚ್ಚಿನ ಸಂಚಲನೆ ಉಂಟಾಗಿತ್ತು. ಸಂವಿಧಾನಿಕ ಸಂಸ್ಥೆಗಳು ಹಾಗೂ ನ್ಯಾಯಾಲಯ ಈ ವಿಷಯ ಗಂಭೀರವಾಗಿ ಪರಿಗಣಿಸಬೇಕಾಯಿತು ಎಂದು ನ್ಯಾಯಾಲಯ ಹೇಳಿದೆ.

ಆದರೆ, ಎಸ್.ಐ.ಟಿ. ಸಮಗ್ರ ತನಿಖೆಯ ನಂತರ ಸುಳ್ಳು ಹೇಳಿಕೆಗಳು ಪೂರ್ಣ ಬಯಲಾಗಿವೆ. ತನಿಖೆಯಿಂದ ನಿಖರ ವಿಷಯಗಳು ಬೆಳಕಿಗೆ ಬಂದಿವೆ ಎಂದು ನ್ಯಾಯಾಲಯ ಹೇಳಿದೆ.

ರಾಜ್ಯ ಸರ್ಕಾರದ ಬಳಿ ಸಮರ್ಪಕ ಪೊಲೀಸ್ ಪಡೆ ಇರದಿದ್ದಾಗ ತ್ವರಿತವಾಗಿ ಕೇಂದ್ರೀಯ ಪಡೆಗಳನ್ನು ಕರೆಸಲಾಯಿತು. ಆಗಿನ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶಾಂತಿ ಕಾಯ್ದುಕೊಳ್ಳಲು ಪದೇ ಪದೇ ಮನವಿ ಮಾಡಿಕೊಂಡಿದ್ದರು ಎಂದು ನ್ಯಾಯಾಲಯ ಹೇಳಿದೆ.

# ಕೈಗಾರಿಕಾ ವಸಾಹತಿಗೆ ಸೌಲಭ್ಯಗಳ ಸಮಸ್ಯೆ



**(1ನೇ ಪುಟದಿಂದ)** ಒಳಚರಂಡಿಯ ನೆಲ ಟ್ಯಾಂಕ್ ಕುಸಿಯುವ ಹಂತ ತಲುಪಿದೆ. ಈ ಬಗ್ಗೆ ಪಾಲಿಕೆಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಜಿಲ್ಲಾ ಸಣ್ಣ ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ಬಿ. ಶಂಭುಲಿಂಗಪ್ಪ ಹೇಳಿದ್ದಾರೆ.

ಕೈಗಾರಿಕಾ ವಸಾಹತು ಈ ಹಿಂದೆ ಕೆ.ಎಸ್.ಎಸ್.ಐ.ಡಿ.ಸಿ. ನಿರ್ವಹಣೆಯ ಲ್ಲಿದ್ದಾಗ, ನಿಧಾನವಾಗಿಯಾದರೂ ಒಂದಿಷ್ಟು ಕೆಲಸಗಳಾಗುತ್ತಿದ್ದವು. ಆದರೆ, ಪಾಲಿಕೆ ವತಿಯಿಂದ ಯಾವುದೇ ಕೆಲಸವಾಗುತ್ತಿಲ್ಲ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಬ್ಬರೂ ಕಾಳಜಿ ತೋರುತ್ತಿಲ್ಲ ಎಂದವರು ತಿಳಿಸಿದ್ದಾರೆ.

ಒಳಚರಂಡಿಯಲ್ಲಿ ನೀರು ಕಟ್ಟಿಕೊಳ್ಳುವ ಸಮಸ್ಯೆ ಹಿಂದಿನಿಂದ ಇದೆ. ಈ ರೀತಿ ಕಟ್ಟಿಕೊಂಡಾಗ ನೀರು ಘಟಕವೊಂದಕ್ಕೆ ನುಗ್ಗಿತ್ತು. ಮಳೆ ನೀರಿನ ಚರಂಡಿಯಲ್ಲಿ ಕಸ ತುಂಬಿಕೊಂಡು ಅಲ್ಲೂ ಸಮಸ್ಯೆಯಾಗಿದೆ. ಅಲ್ಲಿರುವ ಹೂಳು ತೆಗೆಯಲು ಪಾಲಿಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಸಂಘದ ಉಪಾಧ್ಯಕ್ಷ ಎಂ. ಆನಂದ್ ಹೇಳಿದ್ದಾರೆ.

ಒಳಚರಂಡಿ ಸರಿಪಡಿಸಿ ಎಂದು ಪಾಲಿಕೆಗೆ ದೂರಿದಾಗ, ಗುತ್ತಿಗೆದಾರರೊಬ್ಬ ರನ್ನು ಕಳಿಸಿದ್ದರು. ಅವರು ಬೇಜವಾಬ್ದಾರಿಯಿಂದ ಗುಂಡಿ ತೆಗೆದು, ಅರ್ಧಕ್ಕೆ ಕೆಲಸ ಬಿಟ್ಟು ಹೋಗಿದ್ದಾರೆ. ಇಂತಹ ಗುಂಡಿಯಲ್ಲಿ ಒಬ್ಬರು ಬಿದ್ದು ಪೆಟ್ಟು ಮಾಡಿಕೊಂಡ ಘಟನೆಯೂ ನಡೆದಿದೆ. ಅತ್ತ ಒಳಚರಂಡಿಯ ಸಮಸ್ಯೆಯೂ ಬಗೆಹರಿಯದೇ, ಇತ್ತ ಗುಂಡಿ ಮಾತ್ರ ಉಳಿದಕೊಂಡಿದೆ ಎಂದವರು ತಿಳಿಸಿದ್ದಾರೆ.

ನಗರ ಪ್ರದೇಶಗಳಲ್ಲಿ ಮತದಾರರಿರು ತ್ತಾರೆ. ಹೀಗಾಗಿ ಕಾರ್ಪೊರೇಟರ್‌ಗಳು ಮತದಾರರನ್ನು ಓಲೈಸಿಕೊಳ್ಳಲು ಅಲ್ಲಿನ ಸಮಸ್ಯೆಗಳಿಗೆ ಬೇಗ ಸ್ಪಂದಿಸುತ್ತಾರೆ. ಆದರೆ, ಕೈಗಾರಿಕಾ ವಸಾಹತುವಿನಲ್ಲಿ ಮತಗಳು ಇರುವುದಿಲ್ಲ. ಹೀಗಾಗಿ ಸುಮಾರು 2,500 ಜನ ಕೆಲಸ ಮಾಡುವ ಕೈಗಾರಿಕಾ ಪ್ರದೇಶಗಳ ಬಗ್ಗೆ ಜನಪ್ರತಿನಿಧಿಗಳಿಗೂ ಅಸಡ್ಡೆ ಎಂಬುದು ಈ ವಲಯದ ಉದ್ಯಮಿಗಳ ಬೇಸರದ ಮಾತು.

ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಪಾಲಿಕೆ ಗಮನಕ್ಕೆ ತಂದಿದ್ದೇವೆ. ಸಮಸ್ಯೆ ಬಗೆಹರಿಸಲಿದ್ದಾರೆ ಎಂದು ನಿರೀಕ್ಷಿಸಿದ್ದೇವೆ. ಇಲ್ಲವಾದರೆ ಕೈಗಾರಿಕಾ ವಸಾಹತು ನಿರ್ವಹಣೆಯನ್ನು ಕೆ.ಎಸ್.ಎಸ್.ಐ.ಡಿ.ಸಿ.ಗೆ ಮರಳಿಸುವಂತೆ ಒತ್ತಾಯಿಸಲು ಯೋಚಿಸಬೇಕಾಗುತ್ತದೆ ಎಂದು ಉದ್ಯಮಿಗಳು ಹೇಳಿದ್ದಾರೆ.

## ಯು.ಜಿ. ಕೇಬಲ್‌ಗೆ ಕೋಟ್ಯಂತರ ನಷ್ಟ

ಕೈಗಾರಿಕಾ ಪ್ರದೇಶಗಳಿಗೆ ಸುಗಮವಾಗಿ ವಿದ್ಯುತ್ ಪೂರೈಕೆಯಾಗಲಿ ಎಂದು ವಿದ್ಯುತ್ ಇಲಾಖೆ ವತಿಯಿಂದ ಭೂಗತ ವಿದ್ಯುತ್ ಕೇಬಲ್ ಅಳವಡಿಸಲಾಗಿತ್ತು. ಆದರೆ, ಭರಮಸಾಗರ ಏತ ನಿರಾವರಿ ಯೋಜನೆಯ ಪೈಪ್‌ಲೈನ್ ಕಾಮಗಾರಿಗಾಗಿ ವಿದ್ಯುತ್ ಲೈನ್‌ಗೆ ಹಾನಿಯಾಗಿದೆ ಎಂದು ಉದ್ಯಮಿಗಳು ದೂರಿದ್ದಾರೆ.

ವಿದ್ಯುತ್ ಕಂಬದ ಮೂಲಕ ಸಂಪರ್ಕವಿದ್ದಾಗ ಮಳೆಗಾಲದಲ್ಲಿ ಪೂರೈಕೆಗೆ ಸಮಸ್ಯೆ ಹೆಚ್ಚು. ಭೂಗತ ಕೇಬಲ್‌ನಿಂದ ನಿರಂತರ ವಿದ್ಯುತ್ ಪೂರೈಕೆ ಸಾಧ್ಯವಾಗುತ್ತದೆ.

ಕಾಮಗಾರಿ ವೇಳೆ ಯು.ಜಿ. ಕೇಬಲ್‌ಗೆ ಕೋಟ್ಯಂತರ ರೂ.ಗಳ ಹಾನಿಯಾಗಿದೆ. ಇತ್ತ ಕೈಗಾರಿಕೆಗಳಿಗೂ ನಿರಂತರ ವಿದ್ಯುತ್ ಪೂರೈಕೆಗೆ ಸಮಸ್ಯೆಯಾಗಿದೆ ಎಂದು ಜಿಲ್ಲಾ ಸಣ್ಣ ಕೈಗಾರಿಕೋದ್ಯಮಿಗಳ ಸಂಘದ ಉಪಾಧ್ಯಕ್ಷ ಎಂ. ಆನಂದ್ ಹೇಳಿದ್ದಾರೆ.

# ಹಿಂದುಳಿದ ವರ್ಗಕ್ಕೆ ಮೀಸಲಾತಿ ಹೆಚ್ಚಿಸಲು ಅಹಿಂದ ಒತ್ತಾಯ



ರಾಣೇಬೆನ್ನೂರು

ರಾಣೇಬೆನ್ನೂರು, ಜೂ.24- ಜನಸಂಖ್ಯೆಗೆ ತಕ್ಕಷ್ಟು ಮೀಸಲಾತಿ ದೊರಕದೆ ಹಿಂದುಳಿದ ಸಮಾಜಗಳ ಜನರು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಬಹಳಷ್ಟು ನೋವು ಅನುಭವಿಸುತ್ತಿದ್ದಾರೆ. ಕಾರಣ ಮೀಸಲಾತಿ ಹೆಚ್ಚಿಸುವಂತೆ ಒತ್ತಾಯಿಸಿ, ಇಲ್ಲಿನ ಅಹಿಂದ ಸಂಘಟನೆಯಿಂದ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರಿಗೆ ರತ್ನಾಕರ ಕುಂದಾಪೂರ ಅವರು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಕೃಷ್ಣಮೂರ್ತಿ ಸುಣಗಾರ, ಹನುಮಂತಪ್ಪ ಕಬ್ಬಾರ, ಸುರೇಶ ಜಾಡಮಾಲಿ ಇನ್ನಿತರರಿದ್ದರು.

# ಕೂನಬೇವು ರಸ್ತೆ ನಿವಾಸಿಗಳಿಂದ ರಸ್ತೆ ನಿರ್ಮಾಣ



ರಾಣೇಬೆನ್ನೂರು, ಜೂ.24- ನಗರಸಭೆಗೆ ಅಲೆದಾಡಿ ರೋಸಿ ಹೋದ ಇಲ್ಲಿನ ಕೂನಬೇವು ರಸ್ತೆ ಸದಾಶಿವ ನಗರ ಒಂದನೇ ಕ್ರಾಸ್ ನಿವಾಸಿಗಳು ತಮ್ಮ ಸ್ವಂತ ಖರ್ಚಿನಿಂದ ರಸ್ತೆ ನಿರ್ಮಿಸಿಕೊಂಡಿ ದ್ದಾರೆಂದು ಬಿಜೆಪಿ ಮುಖಂಡ ಎ.ಬಿ.ಪಾಟೀಲ ತಿಳಿಸಿದ್ದಾರೆ.

# ಚಳ್ಳಕೆರೆ ಪತ್ರಕರ್ತರ ಸಂಘಕ್ಕೆ ನಿವೇಶನ ಕೋರಿ ಶಾಸಕರಿಗೆ ಮನವಿ



ಚಳ್ಳಕೆರೆ, ಜೂ. 24- ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ನಿವೇಶನ ನೀಡಿ, ಪತ್ರಿಕಾ ಭವನ ನಿರ್ಮಿಸಿಕೊಡುವಂತೆ ಶಾಸಕ ಟಿ. ರಘುಮೂರ್ತಿ ಅವರಿಗೆ ಸಂಘದ ವತಿಯಿಂದ ಮನವಿ ಸಲ್ಲಿಸಲಾಯಿತು.

ಸಂಘದ ತಾಲ್ಲೂಕು ಅಧ್ಯಕ್ಷ ಟಿ. ಜೆ. ತಿಪ್ಪೇಸ್ವಾಮಿ ಹಾಗೂ ಪತ್ರಕರ್ತರು ಮನವಿ ಸಲ್ಲಿಸಿದರು.ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಟಿ.ಜೆ. ತಿಪ್ಪೇಸ್ವಾಮಿ, ಈಶ್ವರಪ್ಪ, ಮಹೇಶ್, ಚಿದಾನಂದ ಮೂರ್ತಿ, ರಾಮಾಂಜನೇಯ, ಮಂಜುನಾಥ, ತಿಮ್ಮಣ್ಣ, ಶಿವಮೂರ್ತಿ, ರಾಜ, ಸಿ.ವೈ. ಗಂಗಾಧರ ಮತ್ತಿತರರಿದ್ದರು.

# ತಿಮ್ಲಾಪುರದಲ್ಲಿ ಕತ್ತು ಹಿಸುಕಿ ಕೊಲೆ

ಹೊನ್ನಾಳಿ

ದಾವಣಗೆರೆ, ಜೂ. 24- ಮಹಿಳೆಯ ಕತ್ತು ಹಿಸುಕಿ ಕೊಲೆ ಮಾಡಿರುವ ದುರ್ಘಟನೆ ತಾಲ್ಲೂಕಿನ ತಿಮ್ಲಾಪುರದಲ್ಲಿ ಗುರುವಾರ ತಡ ರಾತ್ರಿ ನಡೆದಿದೆ.

ತಿಮ್ಲಾಪುರ ಗ್ರಾಮದ ಆಟೋ ಡ್ರೈವರ್ ಚಿನ್ನಪ್ಪ ಅವರ ಪತ್ನಿ ಗೀತಮ್ಮ (35) ಕೊಲೆಯಾದ ಮಹಿಳೆ. ಚಿನ್ನಪ್ಪ ನಿನ್ನೆ ಸಂಜೆ ಆಟೋ ತೆಗೆದುಕೊಂಡು ಕುಂದೂರು ಗ್ರಾಮಕ್ಕೆ ಬಾಡಿಗೆ ಹೋದಾಗ, ಮನೆಯಲ್ಲಿ ಯಾರೂ ಇಲ್ಲದ ವೇಳೆ ಸಂಜೆ ಈ ದುರ್ಘಟನೆ ನಡೆದಿದೆ. ತಿಮ್ಲಾಪುರ ಗ್ರಾಮದ ಹರೀಶ್ ಎಂಬಾತನೇ ಈ ಕೊಲೆ ಮಾಡಿರಬಹುದು ಎಂಬ ಅನುಮಾನವಿದ್ದು, ಅವನ ಮೇಲೆ ಸೂಕ್ತ ಕ್ರಮ ಜರುಗಿಸಬೇಕು ಎಂದು ಚಿನ್ನಪ್ಪ ಹೊನ್ನಾಳಿ ಠಾಣೆಗೆ ದೂರು ನೀಡಿದ್ದಾರೆ. ಸಿಪಿಐ ದೇವರಾಜ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಹಲಸಬಾಳಿಗೆ ಬಸ್ ಸೌಲಭ್ಯ ಕಲ್ಪಿಸಲು ಮನವಿ




ಹರಿಹರ, ಜೂ. 24 - ತಾಲ್ಲೂಕಿನ ಹಲಸಬಾಳು ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಿಕೊಡುವಂತೆ ಆಗ್ರಹಿಸಿ ಜಯಕರ್ನಾಟಕ ಸಂಘಟನೆ ವತಿಯಿಂದ ಕೆ.ಎಸ್.ಆರ್.ಟಿ.ಸಿ ಮ್ಯಾನೇಜರ್ ಅವರಿಗೆ ಮನವಿ ಅರ್ಪಿಸಲಾಯಿತು.

ಈ ವೇಳೆ ಮಾತನಾಡಿದ ಗ್ರಾಮದ ವಿದ್ಯಾರ್ಥಿಗಳು, ಹಲಸಬಾಳು ಗ್ರಾಮಕ್ಕೆ ಸುಮಾರು ವರ್ಷಗಳಿಂದ ಬಸ್ ಸೌಲಭ್ಯ ಇರುವುದಿಲ್ಲ. ಗ್ರಾಮದಿಂದ ಹರಿಹರಕ್ಕೆ ವ್ಯಾಸಂಗ ಮಾಡಲು ಸುಮಾರು 60 ರಿಂದ 70 ವಿದ್ಯಾರ್ಥಿಗಳು ಬರುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ನಾಳೆಯಿಂದಲೇ ಬಸ್ಸಿನ ವ್ಯವಸ್ಥೆ ಒದಗಿಸಿಕೊಡಿ ಎಂದು ಮನವಿಯಲ್ಲಿ ಕೋರಲಾಗಿದೆ.

ಈ ಸಂದರ್ಭದಲ್ಲಿ ನಗರ ಠಾಣೆಯ ಪಿಎಸ್‌ಐ ಸುರೇಶ್, ಜಯಕರ್ನಾಟಕ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಗೋವಿಂದ್, ಪ್ರಧಾನ ಕಾರ್ಯದರ್ಶಿ ಸುನೀಲ್, ವಿದ್ಯಾರ್ಥಿ ಘಟಕದ ಅಧ್ಯಕ್ಷ ಶ್ರೀನಿವಾಸ್, ಬಸಣ್ಣ, ರೋಹಿತ್, ಮಲ್ಲೇಶ್ ಬಿ, ಯೂಸುಫ್, ಭಾಷಾ, ಮಾರುತಿ, ರಾಜು ಮತ್ತಿತರರು ಉಪಸ್ಥಿತರಿದ್ದರು.

# 130 ಕ್ಷೇತ್ರಗಳಿಗೆ ಹೆಚ್ಚು ಗಮನ : ಡಿಕೆಶಿ

**(1ನೇ ಪುಟದಿಂದ)** ಆಯ್ಕೆಗೆ ಸಮೀಕ್ಷಾ ಕಾರ್ಯವನ್ನು ಆರಂಭಿಸಿದ್ದಾರೆ.

ಶಿವಕುಮಾರ್ 130 ಕ್ಷೇತ್ರಗಳಿಗೆ ಸೀಮಿತವಾಗಿ ಹೆಚ್ಚು ಒತ್ತು ನೀಡಲು ಬಯಸಿದ್ದಾರೆ. ಆದರೆ, ಅವರ ಸಹೋದರ ಮಾತ್ರ ಇನ್ನೂ 224 ಕಡೆಯೂ ಗಮನ ಹರಿಸಿ ಎನ್ನುತ್ತಿದ್ದಾರೆ ಎನ್ನಲಾಗಿದೆ.

ಕ್ಷೇತ್ರದಲ್ಲಿ ಯಾರು ಅಭ್ಯರ್ಥಿಯಾಗಬೇಕು, ಪಕ್ಷದ ಪ್ರಭಾವ ಹೇಗಿದೆ, ಕಾಂಗ್ರೆಸ್‌ಗೆ ವಿರುದ್ಧವಾಗಿ ಯಾವ ಪಕ್ಷ ಪ್ರಬಲವಾಗಿದೆ. ಮತದಾರರ ಮನಸ್ಸು ಗೆಲ್ಲಲು ಏನು ಮಾಡಬೇಕೆಂಬ ಬಗ್ಗೆ ಈಗಾಗಲೇ ಎರಡು ಸಮೀಕ್ಷೆಗಳನ್ನು ಮಾಡಿಸಿದ್ದಾರೆ.

ಹರಿಯಾಣ ಮೂಲದ ಸಮೀಕ್ಷಾ ಸಂಸ್ಥೆಯೊಂದು ನೀಡಿರುವ ಪ್ರಾಥಮಿಕ ವರದಿಯಿಂದ ಶಿವಕುಮಾರ್ ಅಧೀರರಾಗಿದ್ದರು. ಸಮೀಕ್ಷಾ ಕಾರ್ಯ ಸರಿಯಿಲ್ಲವೆಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರ ಸಲಹೆ ಮೇರೆಗೆ ಪ್ರಖ್ಯಾತ ಸಂಸ್ಥೆಯೊಂದಕ್ಕೆ ಸಮೀಕ್ಷಾ ಕಾರ್ಯ ವಹಿಸಿದ್ದಾರೆ. ಇದರ ಜೊತೆ ಜೊತೆಯಲ್ಲೇ ಸ್ಥಳೀಯ ಸಂಸ್ಥೆಯೊಂದು ಏಕಕಾಲದಲ್ಲಿ ಆರಂಭಿಸಿದೆ. ಅಭ್ಯರ್ಥಿಗಳ ಆಯ್ಕೆ ಕೆಳಹಂತದಿಂದಲೇ ಆಗಬೇಕು. ಅಭ್ಯರ್ಥಿ ಯಾರೆಂದು ನಾವೇ ಅಂತಿಮಗೊಳಿಸುತ್ತೇವೆ ಎಂದು ದೆಹಲಿಯ ವರಿಷ್ಠರು ರಾಜ್ಯ ನಾಯಕರಿಗೆ ಸಂದೇಶ ನೀಡಿದ್ದರೂ, ಸ್ವತಂತ್ರವಾಗಿ ಸಮೀಕ್ಷೆಯನ್ನು ಶಿವಕುಮಾರ್ ಕೈಗೆತ್ತಿಕೊಂಡಿದ್ದಾರೆ.

ರಾಜ್ಯದಲ್ಲಿ ಅಧಿಕಾರಕ್ಕೆ ಬರಲು 113 ಸ್ಥಾನ ಬೇಕು. 130 ಕ್ಷೇತ್ರಗಳಿಗೆ ಸೀಮಿತವಾಗಿ ಹೋರಾಟ ನಡೆಸೋಣ ಎಂದು ಕ್ಷೇತ್ರಗಳ ಪಟ್ಟಿ ನೀಡಿ, ಇತ್ತ ಕಡೆ ಹೆಚ್ಚು ಗಮನ ಹರಿಸುವಂತೆ ದೆಹಲಿ ಮೂಲದ ಸಂಸ್ಥೆಗೆ ತಿಳಿಸಿದ್ದಾರೆ.

ಉಳಿದ 94 ಕ್ಷೇತ್ರಗಳ ಬಗ್ಗೆಯು ಸಮೀಕ್ಷೆಯಾಗಲೀ. ಆದರೆ ಮೊದಲ ಆದ್ಯತೆ ಮತ್ತು ಹೆಚ್ಚು ಒತ್ತು ಕೊಡುವುದು 130 ಕ್ಷೇತ್ರಗಳಿಗೆ ಎಂದಿದ್ದಾರೆ.

ದೆಹಲಿ ಮೂಲದ ಸಂಸ್ಥೆ ಬೂತ್ ಮಟ್ಟದಲ್ಲಿ ಸಮೀಕ್ಷಾ ಕಾರ್ಯ ಆರಂಭಿಸಿದೆ. ಸ್ಥಳೀಯ ಕಾಂಗ್ರೆಸ್ ಮುಖಂಡರು ಮತ್ತು ಪದಾಧಿಕಾರಿಗಳಿಗೆ ಈ ಸಂಸ್ಥೆ ಕೆಲವು ಸಲಹೆ ಸೂಚನೆಗಳನ್ನು ನೀಡಿ, ನಾವು ಹೇಳಿದಂತೆ ನಡೆದುಕೊಳ್ಳಬೇಕೆಂದು ಆದೇಶ ಮಾಡುತ್ತಿವೆ.

ಕಾಂಗ್ರೆಸ್ ಶಾಸಕರಿಲ್ಲದ ಕ್ಷೇತ್ರಗಳಲ್ಲಿ ಬಿಜೆಪಿ, ಜೆಡಿಎಸ್ ಶಾಸಕರಿದ್ದರೆ ಅಂತಹ ಕ್ಷೇತ್ರಗಳಲ್ಲಿ ಯಾವ ರೀತಿ ಜನಪರ ಹೋರಾಟ ನಡೆಸಬೇಕು, ಮತದಾರರನ್ನು ಮನವೊಲಿಸಲು ಏನು ಮಾಡಬೇಕು, ಪಕ್ಷದ ವರ್ಚಸ್ಸು ಹೆಚ್ಚಿಸಲು ಯಾವ ಕಾರ್ಯಕ್ರಮ ರೂಪಿಸಬೇಕು ಎಂಬ ಮಾಹಿತಿಯು ನೀಡುತ್ತಿದೆ.

ಶಿವಕುಮಾರ್ ನಡೆಸುತ್ತಿರುವ ಸಮೀಕ್ಷೆಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೂ ಸಂಬಂಧವಿಲ್ಲ. ಅಧ್ಯಕ್ಷರು ತಮ್ಮ ಸ್ವತಂತ್ರವಾಗಿ ಈ ಸಮೀಕ್ಷೆ ನಡೆಸುತ್ತಿದ್ದಾರೆ.

ಬಿಜೆಪಿ ಸರ್ಕಾರದ ವಿರುದ್ಧ ರಾಜ್ಯ ಮಟ್ಟದಲ್ಲಿ ಯಾವ ರೀತಿ ಹೋರಾಟ ಮಾಡಬೇಕೆಂಬುದರ ಬಗ್ಗೆಯು ಸಮಿತಿ ಸದಸ್ಯರು ನೀಡುವ ಸಲಹೆಯಂತೆ ಶಿವಕುಮಾರ್ ಸಂಘಟನೆ ಮತ್ತು ಹೋರಾಟ ನಡೆಸುತ್ತಿದ್ದಾರೆ.



॥ ಶ್ರೀ ಕೊಟ್ಟೂರು ಬಸವೇಶ್ವರ ಪ್ರಸನ್ನ ॥


**ಶತಾಯುಷಿ ಶರಣೆ ಶ್ರೀಮತಿ ಅಗಸನಕಟ್ಟೆ ಲಕ್ಕಮ್ಮನವರ ಶಿವಗಣಾರಾಧನೆ ಆಹ್ವಾನ ಪತ್ರಿಕೆ**




**ಕಬ್ಬಳದ ಶ್ರೀ ಶೇಖರಪ್ಪ ಮತ್ತು ಸಹೋದರರು, ಮಕ್ಕಳು**
ಬೆಳವನೂರು, ದಾವಣಗೆರೆ ತಾ. ಜಿ. ಇವರು ಮಾಡುವ ವಿಜ್ಞಾಪನೆಗಳು.
ದಿ. 18.06.2022ನೇ ಶನಿವಾರ ಬೆಳಿಗ್ಗೆ 7.30ಕ್ಕೆ ನಮ್ಮ ಅಕ್ಕನವರಾದ
**ಶತಾಯುಷಿ ಶರಣೆ ಶ್ರೀಮತಿ ಅಗಸನಕಟ್ಟೆ ಲಕ್ಕಮ್ಮನವರು**
(ಲಿಂ. ಶ್ರೀ ಸಿ. ಚನ್ನಬಸಪ್ಪನವರ ಧರ್ಮಪತ್ನಿ)
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಶಿವಗಣಾರಾಧನೆಯನ್ನು** ದಿ. 26.06.2022ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಜಿ.ತಾ. ಹೊಸ ಬೆಳವನೂರು ಗ್ರಾಮದಲ್ಲಿರುವ ಶ್ರೀ ಬಸವೇಶ್ವರ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಸರೋಜಮ್ಮ ಶ್ರೀ ಸದಾಶಿವಪ್ಪ ಮತ್ತು ಸಹೋದರರು ಮತ್ತು ಮಕ್ಕಳು
ಶ್ರೀ ಮಲ್ಲಪ್ಪ ಮತ್ತು ಮಕ್ಕಳು, ಚಿಕ್ಕನಹಳ್ಳಿ ವಂಶಸ್ಥರು, ಅಗಸನಕಟ್ಟೆ
ಶ್ರೀಮತಿ ಗುರುಶಾಂತಮ್ಮ ಲಿಂ. ಶ್ರೀ ರುದ್ರಗೌಡ್ರು ಮತ್ತು ಮಕ್ಕಳು, ಚಿಕ್ಕವ್ವನಾಗ್ತಿಹಳ್ಳಿ ಹಾಗೂ ಸೊಸೆಯಂದಿರು,
ಅಳಿಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು, ಕಬ್ಬಳದರ ವಂಶಸ್ಥರು ಮತ್ತು
ಬೆಳವನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. 99808 23889



**15ನೇ ವರ್ಷದ ಪುಣ್ಯಸ್ಮರಣೆ**



**ದಿ॥ ಷಣ್ಮುಖ ಬಿರಾದಾರ**
*ಸಾವಿರಾರು ಕನಸುಗಳು ಸಾಕಾರವಾಗುವ ಮೊದಲೇ ಶಿವ ಸಾನ್ನಿಧ್ಯವನ್ನು ಸೇರಿದ ನೀನು ನಮ್ಮೆಲ್ಲರ ಮನಸ್ಸಿನಲ್ಲಿ ಸದಾ ನೆಲೆಸಿರುವೆ. ನಿನ್ನ ಅಗಲಿಕೆಯ ನೋವಿನಲ್ಲೇ ದಿನ ಕಳೆಯುತ್ತಿರುವ...*
ತಾಯಿ : ನೀಲಮ್ಮ ಬಿರಾದಾರ, ದಾವಣಗೆರೆ.
ಸಹೋದರರು, ಸಹೋದರಿಯರು, ಅತ್ತೆ-ಮಾವಂದಿರು,
ಅಳಿಯಂದಿರು ಮತ್ತು ಅಪಾರ ಬಂಧು-ಮಿತ್ರರು.
ಶ್ರೀ ಅಮರೇಶ್ವರ ಪ್ರಾವಿಜನ್ ಸ್ಟೋರ್
10ನೇ ಮೇನ್, 4ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ಮೊ: 97399 48413



**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**




॥ ಶ್ರೀ ಮೈಲಾರ ಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಹುಚ್ಚಂಗೆಮ್ಮದೇವಿ ಪ್ರಸನ್ನ ॥
ದಾವಣಗೆರೆ ಎಸ್.ಎಸ್. ಲೇಔಟ್, ಬಿ ಬ್ಲಾಕ್ ವಾಸಿ
**ಶ್ರೀಮತಿ ವಸಂತಮ್ಮ ಮತ್ತು ಮಕ್ಕಳು**
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ : 17-06-2022ನೇ ಶುಕ್ರವಾರ ಮಧ್ಯಾಹ್ನ 12-30ಕ್ಕೆ
ನನ್ನ ಪೂಜ್ಯ ಪತಿಯವರಾದ
**ಶ್ರೀ ಚಿದಾನಂದ್ ಎಂ.ಎನ್.**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ : 25-06-2022ನೇ ಶನಿವಾರ ಬೆಳಿಗ್ಗೆ 10-30ಕ್ಕೆ ಎಸ್.ಎಸ್. ಲೇಔಟ್, 'ಬಿ' ಬ್ಲಾಕ್, ನವೋದಯ ಸ್ಕೂಲ್ ಹಿಂಭಾಗದಲ್ಲಿರುವ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತರು :
ಶ್ರೀಮತಿ ವಸಂತಮ್ಮ ಮಗ ವಿನಯ್‌ಕುಮಾರ್ ಎಂ.ಸಿ. ಮತ್ತು ಸಹೋದರಿಯರು,
ಸೊಸೆಯಂದಿರು, ಅಳಿಯಂದಿರು, ಮಡಿವಾಳ ವಂಶಸ್ಥರು, ಮೊ : 90196 81452
ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿಕೆ.



**ಕೈಲಾಸ ಶಿವಗಣಾರಾಧನೆ**
**ಶ್ರೀ ಎಂ.ಸಿದ್ದಲಿಂಗಯ್ಯ ಮತ್ತು ಸಹೋದರರು**
ಯರೇಚಿಕ್ಕನಹಳ್ಳಿ, ಹೊನ್ನಾಳಿ ತಾ॥ ದಾವಣಗೆರೆ ಜಿ॥ ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 15-06-2022ನೇ ಬುಧವಾರ ಬೆಳಿಗ್ಗೆ 11.05ಕ್ಕೆ ನನ್ನ ಪೂಜ್ಯ ಅಣ್ಣನವರಾದ



ಜನನ 05-05-1936
ನಿಧನ 15-06-2022
**ಶರಣ ಎಂ.ಸದಾಶಿವಯ್ಯನವರು**
ನಿವೃತ್ತ ಕೆ.ಇ.ಬಿ. ಇಂಜನಿಯರ್ ಹಾಗೂ ಮಾಜಿ ಅಧ್ಯಕ್ಷರು, ಶಿವ ಕೋ-ಆಪ್ ಬ್ಯಾಂಕ್
ಮಾಜಿ ಸದಸ್ಯರು, ತಾಲೂಕು ಪಂಚಾಯಿತಿ, ಹೊನ್ನಾಳಿ
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು 26-06-2022 ಭಾನುವಾರ ಬೆಳಿಗ್ಗೆ 11 ಗಂಟೆಗೆ ಯರೇಚಿಕ್ಕನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಎಂ.ಸಿದ್ದಲಿಂಗಯ್ಯ ಮತ್ತು ಸಹೋದರರು, ಮೃತ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮಠದ ವಂಶಸ್ಥರು, ಬಂಧುಮಿತ್ರರು ಹಾಗೂ ಯರೇಚಿಕ್ಕನಹಳ್ಳಿ ಗ್ರಾಮಸ್ಥರು
ವಿ.ಸೂ.:- ಆಹ್ವಾನ ಪತ್ರಿಕೆ ತಲುಪದೆ ಇದ್ದವರಿಗೆ ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಲು ವಿನಂತಿ



**ನಮ್ಮ ದವನದಲ್ಲಿ ಗಣಪತಿ ಸ್ತುತಿ**

ದಾವಣಗೆರೆ, ಜೂ. 24- ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 'ನಮ್ಮ ದವನ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಗಣಪತಿ ಸ್ತುತಿಸುವ ಮನಮೋಹಕ ನೃತ್ಯವನ್ನು ಪ್ರಸ್ತುತಪಡಿಸಿದರು.

# ಜಮೀನು ಸಾಗುವಳಿ ಸಕ್ರಮಕ್ಕೆ ಮತ್ತೊಂದು ವರ್ಷ ಅವಕಾಶ

ಬೆಂಗಳೂರು, ಜೂ. 24 - ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ ಸಕ್ರಮಗೊಳಿಸಲು ಉಳುಮೆದಾರರು ಅರ್ಜಿ ಸಲ್ಲಿಸಲು ಮತ್ತೊಂದು ವರ್ಷ ಅವಕಾಶ ನೀಡಲಾಗಿದೆ. ಸರ್ಕಾರ ಈ ಸಂಬಂಧ ಆದೇಶ ಹೊರಡಿಸಿ, ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 94ಎ (4) ರಡಿಯಲ್ಲಿ ನಮೂನೆ 57 ರಲ್ಲಿ ಅರ್ಜಿಗಳನ್ನು ಸ್ವೀಕರಿಸಲು 26ನೇ ಮೇ, 2023 ರವರೆಗೂ ವಿಸ್ತರಿಸಲಾಗಿದೆ.

ಯಾರು ಸಾಗುವಳಿದಾರರು ಅರ್ಜಿಗಳನ್ನು ಸಲ್ಲಿಸಿಲ್ಲವೋ ಅಂತಹವರು ಸಂಬಂಧಪಟ್ಟ ತಾಲ್ಲೂಕು ಕಚೇರಿಗಳಲ್ಲಿ ತಮ್ಮ ದಾಖಲೆಗಳನ್ನು ಸಲ್ಲಿಸಿ, ಸಕ್ರಮಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದಿದೆ.

## ಕಾರುಗಳ ಸುರಕ್ಷತೆಗೆ ಭಾರತ್ ಎನ್‌ಸಿಎಪಿ ತಾರಾ ಶ್ರೇಯಾಂಕ

ನವದೆಹಲಿ, ಜೂ. 24 - ರಸ್ತೆ ಸುರಕ್ಷತೆಗೆ ಉತ್ತೇಜನ ನೀಡುವ ಸಲುವಾಗಿ ಕಾರುಗಳ ಸುರಕ್ಷತೆಗೆ ಹೊಸ ಭಾರತ್ ಎನ್‌ಸಿಎಪಿ ತಾರಾ ಶ್ರೇಯಾಂಕ ಪದ್ಧತಿ ರೂಪಿಸುವುದಾಗಿ ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಭಾರತ್ ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಮ್ (ಭಾರತ್ ಎನ್‌ಸಿಎಪಿ) ಮೂಲಕ, ಕಾರುಗಳ ಅಪಘಾತ ಪರೀಕ್ಷೆ ನಡೆಸಿ ಶ್ರೇಯಾಂಕ ರೂಪಿಸಲಾಗುವುದು.

ಇದು ಕಾರು ಉತ್ಪಾದಕರಲ್ಲಿ ಆರೋಗ್ಯ ಕರ ಸ್ಪರ್ಧೆ ತರಲಿದೆ ಎಂದು ಗಡ್ಕರಿ ಹೇಳಿದ್ದಾರೆ. ಇದು ಪ್ರಯಾಣಿಕರ ಸುರಕ್ಷತೆಗೆ ನೆರವಾಗುವುದಷ್ಟೇ ಅಲ್ಲದೇ, ಭಾರತ ದಿಂದ ಕಾರುಗಳ ರಫ್ತು ಮಾಡಲೂ ಉತ್ತೇಜನ ಒದಗಿಸ ಲಿದೆ ಎಂದು ಗಡ್ಕರಿ ಹೇಳಿದ್ದಾರೆ.

ಭಾರತದ ಮಾನದಂಡಗ ಳನ್ನು ಜಾಗತಿಕ ಶಿಷ್ಟಾಚಾರಗಳ ಜೊತೆ ಸರಿದೂಗಿಸಲಾಗುವುದು. ಭಾರತದಲ್ಲಿರುವ ಸೌಲಭ್ಯಗಳಲ್ಲಿ ವಾಹನಗಳ ಪರೀಕ್ಷೆ ನಡೆಸಲಾಗುವುದು ಎಂದು ಗಡ್ಕರಿ ತಿಳಿಸಿದ್ದಾರೆ.

# ಗುರುಸಿದ್ದಾಪುರದ ಪಿಡಿಒ ಅಮಾನತ್ತು

## ಬೋಗಸ್ ಜಾಬ್ ಕಾರ್ಡ್ ಸೃಷ್ಟಿಸಿ ಭ್ರಷ್ಟಾಚಾರದ ಹಿನ್ನೆಲೆ

ಜಗಳೂರು, ಜೂ. 24- ಉದ್ಯೋಗ ಖಾತ್ರಿ ಯೋಜನೆಯಡಿ ಬೋಗಸ್ ಜಾಬ್ ಕಾರ್ಡ್ ಸೃಷ್ಟಿಸಿ ಕೋಟ್ಯಾಂತರ ರೂ. ಹಣ ಭ್ರಷ್ಟಾಚಾರ ಹಾಗೂ 15ನೇ ಹಣಕಾಸು ಯೋಜನೆಯಲ್ಲಿ ಹಣ ದುರುಪಯೋಗ ಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆ ಜಿ.ಪಂ. ಸಿಇಓ ಡಾ. ಚನ್ನಪ್ಪ ಅವರು ತಾಲ್ಲೂಕಿನ ಗುರುಸಿದ್ದಾಪುರ ಗ್ರಾ.ಪಂ. ಪಿಡಿಓ ಎ.ಟಿ. ನಾಗರಾಜ್ ಅವರನ್ನು ಅಮಾನತ್ತು ಮಾಡಿ ಆದೇಶ ಹೊರಡಿಸಿದ್ದಾರೆ.

ನಾಗರಾಜ್ ಅಣಬೂರು ಗ್ರಾ.ಪಂ. ಪಿಡಿಓ ಆಗಿದ್ದು, ಹೆಚ್ಚುವರಿ ಪ್ರಭಾರ ಹನುಮಂತಾಪುರ ಮತ್ತು ಗುರುಸಿದ್ದಾಪುರ ಗ್ರಾ.ಪಂ.ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸರ್ಕಾರಿ ನೌಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರಿಕ ಸೇವಾ ನಿಯಮಗಳು -2021ರ ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿ ಕರ್ತವ್ಯಲೋಪ ಎಸಗಿರುವುದು ಕಂಡು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಪಿಡಿಓ ಎ.ಟಿ. ನಾಗರಾಜ್ ಅವರನ್ನು ಇಲಾಖಾ ವಿಚಾರಣೆ ಬಾಕಿ ಇಟ್ಟು ಅಮಾನತ್ತುಗೊಳಿಸಿ, ನೌಕರರ ಹುದ್ದೆಯ ಹಕ್ಕನ್ನು ಚನ್ನಗಿರಿ ತಾಲ್ಲೂಕು ತಿಪ್ಪಗೊಂಡನಹಳ್ಳಿ ಗ್ರಾ.ಪಂ. ನಲ್ಲಿ ಖಾಲಿ ಇರುವ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ವರ್ಗಾಯಿಸಲಾಗಿದೆ ಎಂದು ಜಿ.ಪಂ. ಸಿಇಓ ಡಾ. ಚನ್ನಪ್ಪ ಆದೇಶದಲ್ಲಿ ತಿಳಿಸಿದ್ದಾರೆ.

ಮಲೆ ಮಾಚಿಕೆರೆ ಗ್ರಾಮದಲ್ಲಿ ಕೆರೆಯಲ್ಲಿ ನಾಲ್ಕು ದಿಕ್ಕುಗಳಲ್ಲೂ ಹೂಳೆತ್ತಲಾಗಿದೆ ಎಂದು ಸುಳ್ಳು ದಾಖಲೆ ಸೃಷ್ಟಿಸಿ, ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ಮಾಡಿದ್ದಾರೆ ಎಂದು ಮಲೆ ಮಾಚಿಕೆರೆ ಗ್ರಾಮದ ಕೆ.ಎಸ್. ಕುಮಾರ್, ಮಹೇಶ್, ಹನುಮಂತಪ್ಪ ಮತ್ತು ರಂಗಪ್ಪ ಎನ್ನುವವರು ದಾಖಲೆ ಸಮೇತ ಜಿ.ಪಂ. ಸಿಇಓ ಡಾ. ಚನ್ನಪ್ಪ ಅವರಿಗೆ ಕಾನೂನು ಕ್ರಮ ಕೈಗೊಳ್ಳಲು ದೂರು ನೀಡಿದ್ದರು.



## ರಾಣೇಬೆನ್ನೂರು : ಎಸ್.ಟಿ.ಜೆ ತಂಡ ಪ್ರಥಮ

ರಾಣೇಬೆನ್ನೂರು, ಜೂ.24- ಹಳಿಯಾಳದಲ್ಲಿ ನಡೆದ ಬೆಳಗಾವಿ ಇಂಟರ್‌ಜೋನ್‌ಹುಡುಗರ ಖೋಖೋ ಸ್ಪರ್ಧೆಯಲ್ಲಿ ರಾಣೇಬೆನ್ನೂರಿನ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ತಾಂತ್ರಿಕ ಮಹಾವಿದ್ಯಾಲಯದ ಹುಡುಗರು ಪ್ರಥಮ ಸ್ಥಾನ ಗಳಿಸಿದ್ದಾರೆ.

# ದಾವಣಗೆರೆ ವಿ.ವಿ. ತಂಬಾಕು ಮುಕ್ತವೆಂದು ಘೋಷಣೆ

## ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಕರೆ



ದಾವಣಗೆರೆ, ಜೂ.24 - ನಮ್ಮ ಕುಟುಂಬದವರು ಹಾಗೂ ನೆರೆಹೊರೆಯವರಿಗೂ ತಂಬಾಕಿನಿಂದ ಆಗುವ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸಿದಲ್ಲಿ ತಂಬಾಕು ಮುಕ್ತ ಸಮಾಜ ನಿರ್ಮಾಣ ಮಾಡಬಹುದು ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯದ ಎಂ.ಬಿ.ಎ ಸಭಾಂಗಣದಲ್ಲಿ ಜಿಲ್ಲಾ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಮಾಜ ಕಾರ್ಯ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಏರ್ಪಡಿಸಲಾಗಿದ್ದ 'ತಂಬಾಕು ಮುಕ್ತ ವಿಶ್ವವಿದ್ಯಾನಿಲಯ' ಘೋಷಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಪ್ರೌಢಾವಸ್ಥೆಯಲ್ಲಿ ತಪ್ಪು ಮಾಡುವುದು ಸಹಜ. ಆದರೆ ಅರಿತುಕೊಂಡು ಮಾಡಿದ ತಪ್ಪನ್ನು ತಿದ್ದಿಕೊಳ್ಳಬೇಕು, ತಿದ್ದಿಕೊಳ್ಳದಿರುವುದು ದಡ್ಡತನವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗೌರವ ಕುಲಪತಿಗಳಾದ (ಪ್ರಭಾರಿ) ಪ್ರೊ. ಪಿ. ಲಕ್ಷ್ಮಣ ಮಾತನಾಡಿ, ವಿದ್ಯಾರ್ಥಿಗಳು ಸಮುದಾಯದ ಜೊತೆಗೆ ಕೆಲಸ ಮಾಡುವುದು ಮುಖ್ಯವಾಗಿರುವುದರಿಂದ ಆರೋಗ್ಯ ಮತ್ತು ದುಷ್ಪರಿಣಾಮಗಳ ಬಗ್ಗೆ ಸಮುದಾಯಕ್ಕೆ ಅರಿವು ಮೂಡಿಸುವ ಜವಾಬ್ದಾರಿ ಹೊಂದಿರುತ್ತಾರೆ. ಸಾವು ಖಚಿತ, ಆದರೆ ಆರೋಗ್ಯವಂತ ಜೀವನವಿದ್ದರೆ ಸಾರ್ಥಕ ಜೀವನ ಸಾಗಿಸಲು ಸಾಧ್ಯವೆಂದು ತಿಳಿಸಿದರು.

ದಂತ ವಿಭಾಗದ ಮುಖ್ಯಸ್ಥ ಡಾ.ಪಿ.ಎಂ. ತಿಪ್ಪೇಸ್ವಾಮಿ ಮಾತನಾಡಿ, ತಂಬಾಕಿನಿಂದ ಉಂಟಾಗುವ ದುಷ್ಪರಿಣಾಮಗಳು ಹಾಗೂ ಬಾಯಿ ಕ್ಯಾನ್ಸರ್ ಬಗ್ಗೆ ಸವಿಸ್ತಾರವಾಗಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ|| ಜಿ.ಡಿ ರಾಘವನ್ ಪ್ರಾಸ್ತಾವಿಕವಾಗಿ ಮಾತನಾಡಿ, ಕುಟುಂಬದವರು ಹಾಗೂ ನೆರೆಹೊರೆಯವರಿಗೂ ಇದರ ಬಗ್ಗೆ ಅರಿವು ಮೂಡಿಸಿದಲ್ಲಿ ತಂಬಾಕು ಮುಕ್ತ ಸಮಾಜ ನಿರ್ಮಾಣ ಮಾಡಬಹುದೆಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಪ್ರತಿಮೆ ವೃತ್ತದ ಮುಂದೆ 'ತಂಬಾಕು ಮುಕ್ತ ದಾವಣಗೆರೆ ವಿಶ್ವವಿದ್ಯಾನಿಲಯ' ಎಂಬ ಫಲಕವನ್ನು ಅನಾವರಣಗೊಳಿಸಿದರು.

ಕಾರ್ಯಕ್ರಮದಲ್ಲಿ ಕುಲಸಚಿವರಾದ ಬಿ.ಬಿ. ಸರೋಜ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ, ಸಮಾಜ ಕಾರ್ಯ ಅಧ್ಯಯನದ ಮುಖ್ಯಸ್ಥ ಡಾ. ಬಿ.ಪಿ. ಶಿವಲಿಂಗಪ್ಪ, ಪ್ರಾಧ್ಯಾಪಕ ಡಾ.ಲೋಕೇಶ್, ಎಂ.ಬಿ.ಎ ವಿಭಾಗದ ಮುಖ್ಯಸ್ಥ ಪ್ರೊ.ರಾಜು, ಜಿಲ್ಲಾ ಸಲಹೆಗಾರ ಸತೀಶ್ ಕಲಹಾಳ್ ಭಾಗವಹಿಸಿದ್ದರು.

ಸಂಶೋಧನಾರ್ಥಿ ಬಿ.ಎಸ್. ಕಲ್ಪನಾ ನಿರೂಪಿಸಿದರು. ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಬಿ. ಎಸ್. ಪ್ರದೀಪ್ ಸ್ವಾಗತಿಸಿದರು. ಸಮಾಜ ಕಾರ್ಯಕರ್ತರಾದ ಕೆ.ಪಿ. ದೇವರಾಜ್ ವಂದಿಸಿದರು.



# ಹರಪನಹಳ್ಳಿಯಲ್ಲಿ ಸಂಭ್ರಮದ ಅಜ್ಜಿಹಬ್ಬ

ಹರಪನಹಳ್ಳಿ, ಜೂ.24- ಪಟ್ಟಣದ ವಾಲ್ಮೀಕಿ ನಗರದಲ್ಲಿ ಅಜ್ಜಿ ಹಬ್ಬ ಆಚರಿಸಲಾಯಿತು. ಚಿಕ್ಕೇರಿಗೇರಿ, ಕೊರಮರಗೇರಿ, ಆಂಜನೇಯ ಬಡಾವಣೆ, ಭಾರತಿನಗರ, ಅಂಬೇಡ್ಕರ್ ನಗರ ಸೇರಿದಂತೆ ಹಲವೆಡೆ ಮಾರಕ ರೋಗಗಳು ಬಾರದಿರಲಿ ಮತ್ತು ಮಳೆ ಬೆಳೆ ಚೆನ್ನಾಗಿ ಆಗಲಿ ಎಂದು ಅಜ್ಜಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಎಲ್ಲಾ ಸಮಾಜದವರು ಸೇರಿ ಮಡಿಯಿಂದ ಅಜ್ಜಿ ಅಮ್ಮನಿಗೆ ಪೂಜೆ ಸಲ್ಲಿಸಲು ಮಣ್ಣಿನಿಂದ ಚೌತ ಮನೆ ಮಾಡಲಾಗಿರುತ್ತದೆ. ಅಲ್ಲಿ ದೇವಿಯನ್ನು ತಂದು ಚೌತಮನಿ ಕಟ್ಟೆಯಲ್ಲಿ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಿ, ಹೊಸ ಬಟ್ಟೆ ಧರಿಸಿ, ಬಡಿಗೇರ ನಾಗರಾಜ್ ಮಾನಪ್ಪನವರ ಮನೆಯಿಂದ ತಂದ ಕೇಲು ಮತ್ತು ತೇರಿಗೆ ಪೂಜೆ ಸಲ್ಲಿಸಲಾಗುತ್ತದೆ.

ಭಕ್ತರು ತಮ್ಮ ತಮ್ಮ ಮನೆಯಿಂದ ಹೊಸ ಮರದಲ್ಲಿ ತಂದಿರುವ ಬೇವಿನ ಸೊಪ್ಪು, ತೆಂಗಿನಕಾಯಿ ಮತ್ತು ನೈವೇದ್ಯ ಸಮರ್ಪಿಸಿ, ಉಘೇ ಉಘೇ ಎಂದು ಭಕ್ತಿಯಿಂದ ನಮಿಸುತ್ತಾರೆ.

ಎಲ್ಲಾ ಮನೆಗಳಿಂದಲೂ ಎಡೆ ನೈವೇದ್ಯದ ಮರಗಳು ಬರುವವರೆಗೂ ಉಘೇ ಉಘೇ ಎಂದು ಘೋಷಣೆ ಕೂಗುತ್ತಾ ಹಲಗೆ ವಾದ್ಯ ಮೇಳದೊಂದಿಗೆ ದೇವಿಯ ಕೇಲನ್ನು ಹೊತ್ತುಕೊಂಡು ಬಡಿಗೇರ ನಾಗರಾಜ್ ಮತ್ತು ರಾಜಪ್ಪ, ಸಾಗುತ್ತಿರುವಾಗ ಮಕ್ಕಳು, ಯುವಕರು, ವೃದ್ದರು, ಮಹಿಳೆಯರು ಎಲ್ಲರೂ ಹೆಜ್ಜೆ ಹಾಕುತ್ತಾ ದಾರಿಯುದ್ದಕ್ಕೂ ನೀರನ್ನು ಹಾಕಿ ಉಘೇ ಉಘೇ ಎಂದು ಘೋಷಣೆ ಕೂಗುತ್ತಾರೆ.

ಊರಿನ ಕರಿಗಲ್ಲಿನವರೆಗೂ ಸಾಗಿ ನಂತರ ತಯಾರಿಗೊಳಿಸಿದ ವಾಹನದಲ್ಲಿ ದೇವಿಗೆ ಪೂಜೆ ನೆರವೇರಿಸಿ ಮೂರು ದಿನಗಳ ಒಳಗೆ ಮಳೆ ಬರಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿ ದೇವಿಯನ್ನು ಬೀಳ್ಕೊಟ್ಟರು. (4ನೇ ಪುಟಕ್ಕೆ)

## ಮೋದಿ ನಿಷ್ಕಳಂಕ

(1ನೇ ಪುಟದಿಂದ) ನ್ಯಾಯಾಲಯ, ರಾಜ್ಯ ಆಡಳಿತದ ಒಂದು ವರ್ಗದ ಕೆಲ ಅಧಿಕಾರಿ ಗಳ ವೈಫಲ್ಯ ಇಲ್ಲವೇ ನಿಷ್ಕ್ರಿಯತೆಯನ್ನೇ ಪೂರ್ವ ನಿಯೋಜಿತ ಸಂಚು ಎಂದು ಪರಿಗಣಿಸಲಾಗದು. ಇದನ್ನು ಅಲ್ಪಸಂಖ್ಯಾತರ ವಿರುದ್ಧದ ಸರ್ಕಾರಿ ಪ್ರಾಯೋಜಿತ ಹಿಂಸಾಚಾರ ಎಂದು ಹೇಳಲಾಗದು ಎಂದು ತಿಳಿಸಿದೆ. ತೀರ್ಪು ನೀಡಿರುವ ಪೀಠದಲ್ಲಿ ನ್ಯಾಯಮೂರ್ತಿ ಗಳಾದ ದಿನೇಶ್ ಮಹೇಶ್ವರಿ ಹಾಗೂ ಸಿ.ಟಿ. ರವಿಕುಮಾರ್ ಹೇಳಿದ್ದಾರೆ. ನಿಷ್ಕ್ರಿಯತೆ ಇಲ್ಲವೇ ನಿರ್ಲಕ್ಷ್ಯ ತೋರಿರುವ ಅಧಿಕಾರಿಗಳ ವಿರುದ್ಧ ಇಲಾಖಾ ಕ್ರಮ ಸೇರಿದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆದರೆ, ಇದನ್ನು ಅಪರಾಧಿಕ ಸಂಚು ಎಂದು ಭಾವಿಸಲಾಗದು ಎಂದು ನ್ಯಾಯಾಲಯ ಹೇಳಿದೆ.

ಆಡಳಿತ ವೈಫಲ್ಯದ ಬಗ್ಗೆ ತನಿಖೆ ನಡೆಸಲು ಎಸ್.ಐ.ಟಿ. ರೂಪಿಸಿರಲಿಲ್ಲ. ಅಪರಾಧಿಕ ಸಂಚು ನಡೆದಿತ್ತೇ ಎಂಬ ಬಗ್ಗೆ ತನಿಖೆ ನಡೆಸಲು ಮಾತ್ರ ಎಸ್.ಐ.ಟಿ. ರೂಪಿಸಲಾಗಿತ್ತು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಗೋಧ್ರಾ ರೈಲು ಘಟನೆ ಸೇರಿದಂತೆ ಒಂಭತ್ತು ಪ್ರತ್ಯೇಕ ಅಪರಾಧಗಳ ಬಗ್ಗೆ ಎಸ್.ಐ.ಟಿ. ತನಿಖೆ ನಡೆಸಿದೆ. ಇದರಲ್ಲಿ ಯಾವುದೇ ಸಂಚು ಕಂಡು ಬಂದಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ಗಲಭೆಗಳ ಸಂದರ್ಭದಲ್ಲಿ ತ್ವರಿತವಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಅಪರಾಧಿಗಳಿಗೆ ಶಿಕ್ಷೆ ವಿಧಿಸುವುದಾಗಿ ಆಗಿನ ಮುಖ್ಯಮಂತ್ರಿ ಪದೇ ಪದೇ ಭರವಸೆ ನೀಡಿದ್ದರು. ಸಂಚು ನಡೆಸಲಾಗಿತ್ತು ಎಂಬ ಗಂಭೀರ ಆರೋಪಕ್ಕೆ ಯಾವುದೇ ಸಾಕ್ಷಿಗಳಿಲ್ಲ ಎಂದು ನ್ಯಾಯಾಲಯ ಹೇಳಿದೆ.

## ಮಾನ್ಯ 1ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ನ್ಯಾಯಾಧೀಶರು, ದಾವಣಗೆರೆ

**ಕ್ರಿಮಿನಲ್ ಮಿಸ್ ಸಂಖ್ಯೆ : 310/2022**

ಅರ್ಜಿದಾರರು: **ರಂಗಪ್ಪ ಹೆಚ್.ಬಿ. ಬಿನ್ ಲೇಟ್ ಭೀಮಪ್ಪ**, ವಯಸ್ಸು ಸುಮಾರು 54 ವರ್ಷ, ವಾಸ: ನಲಕುಂದ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ

ವಿರುದ್ಧ ಎದುರುದಾರರು: 1. **ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು**, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. 2. **ಲಕ್ಷ್ಮಮ್ಮ ಕೋಂ ಲೇಟ್** 85 ವರ್ಷ ಹೊಸ ನಾಯ್ಕನ ಹಳ್ಳಿ ಗ್ರಾಮ, ಹದಡಿ ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ 3. **ಭೀಮಪ್ಪ ಬಿನ್ ರಂಗಪ್ಪ, (ಪೌತಿ) ಪೌತಿ ವಾರಸುದಾರರು (3ಎ). ದುಗ್ಗಮ್ಮ ಕೋಂ ಲೇಟ್ ಭೀಮಪ್ಪ** (ಪೌತಿ) **(3ಬಿ) ಚಂದ್ರಮ್ಮ ಕೋಂ ರಂಗಪ್ಪ**, 70 ವರ್ಷ ಗೆದ್ದಲಹಟ್ಟಿ ಗ್ರಾಮ, ಸಂತೇಬೆನ್ನೂರು ಪೋಸ್ಟ್, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ **(3ಸಿ) ಲಕ್ಕಮ್ಮ ಕೋಂ ಲೇಟ್ ಭೀಮಪ್ಪ**, 78 ವರ್ಷ, ನಲ್ಕುಂದ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ 4. **ನಿಂಗಮ್ಮ ಕೋಂ ಚಂದ್ರಪ್ಪ** (ಪೌತಿ) ಪೌತಿ ವಾರಸುದಾರರು **(4ಎ) ಸುಶೀಲಮ್ಮ ಕೋಂ ನಿಂಗಪ್ಪ** 72 ವರ್ಷ, ನಲ್ಕುಂದ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(4ಬಿ) ರಾಮಪ್ಪ ಬಿನ್ ಚಂದ್ರಪ್ಪ** (ಪೌತಿ) **ಪೌತಿ ವಾರಸುದಾರರು (4ಬಿ.1) ಚಂದ್ರಪ್ಪ ಬಿನ್ ಲೇಟ್ ರಾಮಪ್ಪ**, 40 ವರ್ಷ, ಮಾಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(4ಬಿ.2) ದುಗ್ಗೇಶಿ ಬಿನ್ ಲೇಟ್ ರಾಮಪ್ಪ** 38 ವರ್ಷ, ಮಾಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(4ಸಿ) ಲಕ್ಷ್ಮಪ್ಪ ಬಿನ್ ಲೇಟ್ ಚಂದ್ರಪ್ಪ**, 70 ವರ್ಷ, ಮಾಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(4ಡಿ) ಕಮಲಮ್ಮ ಕೋಂ ಲೇಟ್ ತಿಪ್ಪೇಸ್ವಾಮಿ** 69 ವರ್ಷ, ಮಾಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(4ಇ)** ಬಿ.ಸಿ. **ಬಸವರಾಜಪ್ಪ ಬಿನ್ ಲೇಟ್ ಚಂದ್ರಪ್ಪ** 68 ವರ್ಷ, ಮಾಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. **(4ಎಫ್) ಮಾರ್ತಾಂಡಪ್ಪ ಬಿನ್ ಲೇಟ್ ಚಂದ್ರಪ್ಪ** (ಪೌತಿ) **ಪೌತಿ ವಾರಸುದಾರರು (4ಎಫ್.1) ವಾಸುದೇವ ಬಿನ್ ಲೇಟ್ ಮಾರ್ತಾಂಡಪ್ಪ**, 28 ವರ್ಷ ಮಾಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(4ಜಿ) ರತ್ನಮ್ಮ ಕೋಂ ಲೇಟ್ ಆನಂದಪ್ಪ** 65 ವರ್ಷ, ಮಯಕೊಂಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ 5. **ಗಂಗಮ್ಮ ಕೋಂ ತಿಮ್ಮಪ್ಪ** (ಪೌತಿ) ಪೌತಿ ವಾರಸುದಾರರು **(5ಎ) ಲಕ್ಕಮ್ಮ ಕೋಂ ಲೇಟ್ ಜಯಪ್ಪ**, 70 ವರ್ಷ, ನಲ್ಕುಂದ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(5ಬಿ) ಹನುಮಂತಪ್ಪ ಬಿನ್ ಲೇಟ್ ತಿಮ್ಮಪ್ಪ** 69 ವರ್ಷ, ನಲ್ಕುಂದ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(5ಸಿ) ಲಕ್ಷ್ಮಮ್ಮ ಕೋಂ ನಾಗೇಂದ್ರಪ್ಪ (ಕರೆಂಗಪ್ಪರ)** ದೇವರಹಳ್ಳಿ, ಚನ್ನಗಿರಿ ತಾ, ದಾವಣಗೆರೆ ಜಿಲ್ಲೆ **6.ನಾಗಮ್ಮ ಕೋಂ ಲೇಟ್ ಗಿರಿಯಪ್ಪ** (ಪೌತಿ) **ಪೌತಿ ವಾರಸುದಾರರು (6ಡಿ.4) ಸಾವಿತ್ರ ಕೋಂ ಉಮೇಶ್**, 26 ವರ್ಷ, ಅಂಪೈನಮಾಳಿಗೆ, ದ್ಯಾಮವ್ವನಹಳ್ಳಿ ಪೋಸ್ಟ್, ಚಿತ್ರದುರ್ಗ ತಾ, ಜಿಲ್ಲೆ **(6ಡಿ.5) ಸುನೀತ ಬಿನ್ ಲೇಟ್ ಓಂಕಾರಪ್ಪ** 21 ವರ್ಷ, ಹಿಂಡಸಕಟ್ಟೆ ಗ್ರಾಮ, ನಲ್ಕುಂದ ಪೋಸ್ಟ್ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(6ಡಿ.6) ಸಾಕಮ್ಮ ಬಿನ್ ಲೇಟ್ ಓಂಕಾರಪ್ಪ** 20 ವರ್ಷ, ಹಿಂಡಸಕಟ್ಟೆ ಗ್ರಾಮ, ನಲ್ಕುಂದ ಪೋಸ್ಟ್ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(6ಡಿ.7) ನಾಗರಾಜ ಬಿನ್ ಲೇಟ್ ಓಂಕಾರಪ್ಪ** 19 ವರ್ಷ ಹಿಂಡಸಕಟ್ಟೆ ಗ್ರಾಮ, ನಲ್ಕುಂದ ಪೋಸ್ಟ್ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(6ಇ) ರತ್ನಮ್ಮ ಕೋಂ ರುದ್ರಪ್ಪ**, 45 ವರ್ಷ, ಹಿಂಡಸಕಟ್ಟೆ ಗ್ರಾಮ, ನಲ್ಕುಂದ ಪೋಸ್ಟ್ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **(6ಎಫ್) ಹನುಮಮ್ಮ ಕೋಂ ರೇವಣಸಿದ್ದಪ್ಪ**, 44 ವರ್ಷ, ಬುಳ್ಳಸಾಗರ ಗ್ರಾಮ@ ಪೋಸ್ಟ್, ಚನ್ನಗಿರಿ ತಾ, ದಾವಣಗೆರೆ ಜಿಲ್ಲೆ **(6ಜಿ) ಭೀಮಪ್ಪ ಬಿನ್ ಗಿರಿಯಪ್ಪ** 43 ವರ್ಷ, ಹಿಂಡಸಕಟ್ಟೆ ಗ್ರಾಮ, ನಲ್ಕುಂದ ಪೋಸ್ಟ್, ದಾವಣಗೆರೆ ತಾ|| & ಜಿ|| **(6ಹೆಚ್) ಸುರೇಶ್ ಬಿನ್ ಗಿರಿಯಪ್ಪ** 42 ವರ್ಷ, ಹಿಂಡಸಕಟ್ಟೆ ಗ್ರಾಮ, ನಲ್ಕುಂದ ಪೋಸ್ಟ್, ದಾವಣಗೆರೆ ತಾ|| & ಜಿ|| **(6ಐ) ಕಮಲಮ್ಮ ಕೋಂ ಗುಡದಪ್ಪ** 41 ವರ್ಷ, ದೇವರಹಳ್ಳಿ ಗ್ರಾಮ/ಪೋಸ್ಟ್ ಚನ್ನಗಿರಿ ತಾ, ದಾವಣಗೆರೆ ಜಿ. **7. ನಿಂಗಪ್ಪ ಬಿನ್ ಲೇಟ್ ರಂಗಪ್ಪ** (ಪೌತಿ) **ಪೌತಿ ವಾರಸುದಾರರು (7ಎ) ಸುಶೀಲಮ್ಮ ಕೋಂ ಲೇಟ್ ನಿಂಗಪ್ಪ**, 72 ವರ್ಷ, ನಲ್ಕುಂದ ಗ್ರಾಮ/ಪೋಸ್ಟ್, ದಾವಣಗೆರೆ ತಾ|| & ಜಿ|| **(7ಬಿ) ಕಮಲಮ್ಮ ಕೋಂ ಹನುಮಂತಪ್ಪ** 65 ವರ್ಷ, ನಲ್ಕುಂದ ಗ್ರಾಮ/ಪೋಸ್ಟ್, ದಾವಣಗೆರೆ ತಾ|| & ಜಿ|| **(7ಸಿ) ಸಾವಿತ್ರಮ್ಮ ಕೋಂ ನಾಗಪ್ಪ**, 53 ವರ್ಷ, ಗೆದ್ದಲಹಟ್ಟಿ, ಸಂತೆಬೆನ್ನೂರು ಪೋಸ್ಟ್, ಚನ್ನಗಿರಿ ತಾ, ದಾವಣಗೆರೆ ಜಿಲ್ಲೆ **8. ಜಯಪ್ಪ ಬಿನ್ ಲೇಟ್ ರಂಗಪ್ಪ ಪೌತಿ ವಾರಸುದಾರರು (8ಎ) ಲಕ್ಕಮ್ಮ ಕೋಂ ಲೇಟ್ ಜಯಪ್ಪ** 70 ವರ್ಷ, ನಲ್ಕುಂದ ನಲ್ಕುಂದ ಗ್ರಾಮ/ಪೋಸ್ಟ್, ದಾವಣಗೆರೆ ತಾ|| & ಜಿ|| (8ಬಿ) ಮಹಾಬಲೇಶ್ವರಪ್ಪ ಬಿನ್ ಲೇಟ್ ಜಯಪ್ಪ 45 ವರ್ಷ, ನಲ್ಕುಂದ ಗ್ರಾಮ/ಪೋಸ್ಟ್, ದಾವಣಗೆರೆ ತಾ|| & ಜಿ|| (8ಸಿ) ಪರಮೇಶ್ವರಪ್ಪ ಬಿನ್ ಲೇಟ್ ಜಯಪ್ಪ, 40 ವರ್ಷ, ನಲ್ಕುಂದ ಗ್ರಾಮ/ಪೋಸ್ಟ್, ದಾವಣಗೆರೆ ತಾ|| & ಜಿ||

**ಪತ್ರಿಕಾ ಪ್ರಕಟಣೆ**

ಅರ್ಜಿದಾರ ಅಜ್ಜನಾದ ದಿವಂಗತ ರಂಗಪ್ಪ ಬಿನ್ ಲೇಟ್ ನಿಂಗಪ್ಪ, ಇವರು ದಿನಾಂಕ 25.08.1965 ರಂದು ದಾವಣಗೆರೆ ತಾಲ್ಲೂಕು ನಲ್ಕುಂದ ಗ್ರಾಮದ ಮನೆಯಲ್ಲಿ ಮರಣ ಹೊಂದಿದ್ದು, ಅವರು ಮರಣ ಪ್ರಮಾಣ ಪತ್ರವನ್ನು ಕಂದಾಯ ಅಧಿಕಾರಿಗಳಿಗೆ ವಂಶವೃಕ್ಷ ಮತ್ತು ರಿ. ಸ. ನಂ: 92/3ರಲ್ಲಿ 1 ಎಕರೆ, 25 ಗುಂಟೆ ಮತ್ತು ರಿ.ಸ.ನಂ: 93/1ರಲ್ಲಿ 17 ಗುಂಟೆ ಜಮೀನನ್ನು ವರ್ಗಾವಣೆ ಮಾಡಿಕೊಳ್ಳುವ ಸಲುವಾಗಿ ಕಂದಾಯ ಅಧಿಕಾರಿಗಳಿಗೆ ಸಲ್ಲಿಸಲಿಕ್ಕೆ ಕೋರಿ, ದಾವಣಗೆರೆ ಪ್ರಧಾನ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. (ಕಿ.ವಿ) ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲೆ ಮಾಡಿದ್ದು ಪ್ರಕರಣವು ದಿನಾಂಕ : 20.07.2022ರಂದು ಇರುತ್ತದೆ. ಮೇಲ್ಕಂಡ ಅರ್ಜಿಗೆ ಸಂಬಂಧಪಟ್ಟ ಯಾರಾದರೂ ತಂಟೆ-ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ ಅಂತಹವರು ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಂಟೆ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿದಾರರ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದಿಂದ ಈ ದಿನಾಂಕ 20.06.2022ರಂದು ಕೊಡಲ್ಪಟ್ಟಿದೆ.


ಅರ್ಜಿದಾರ ಪರ ವಕೀಲರು
**ಲಕ್ಷ್ಮಿಪತಿ,**
**ಮೊ: 91649 15808**

ನ್ಯಾಯಾಲದ ಆದೇಶದ ಮೇರೆಗೆ
**ಶಿರಸ್ತೇದಾರರು,** ಪ್ರಧಾನ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ (ಕಿ.ವಿ) ನ್ಯಾಯಾಲಯ, ದಾವಣಗೆರೆ


## ದಾವಣಗೆರೆ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘ (ರಿ.)

**ಆಡಳಿತ ಮಂಡಳಿ ಚುನಾವಣೆ-2022-2025**

**ಈ ಕೆಳಕಂಡ 13 ಜನರ ತಂಡಕ್ಕೆ ತಮ್ಮ ಅಮೂಲ್ಯವಾದ ಮತ ನೀಡಲು ಕೋರುತ್ತೇವೆ.**

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಕ್ರ.ಸಂ. | ಅಭ್ಯರ್ಥಿಯ ಹೆಸರು |
|---|---|---|---|
| 1 |  ಉಜ್ಜನಪ್ಪ ಎ.ಆರ್.<br>ನಿ. ಉಪ ತಹಶೀಲ್ದಾರ್ | 16 |  ಮರುಳಸಿದ್ದಪ್ಪ ಕೆ.ಸಿ.<br>ನಿ. ಪ್ರೌಢಶಾಲಾ ಸಹ ಶಿಕ್ಷಕರು |
| 5 |  ಗುರುಮೂರ್ತಿ ಎಸ್.<br>ನಿ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ | 17 |  ಮಲ್ಲಿಕಾರ್ಜುನಯ್ಯ ಬಿ.ಎಂ.<br>ನಿ. ಹಿರಿಯ ಆರೋಗ್ಯ ಸಹಾಯಕರು |
| 8 |  ಬಿ. ದಿಳ್ಯಪ್ಪ<br>ನಿ. ಮುಖ್ಯೋಪಾಧ್ಯಾಯರು | 18 |  ಮಹೇಶ್ವರಪ್ಪ ಎನ್.<br>ನಿ. ಹಿರಿಯ ಮಾರುಕಟ್ಟೆ ಮೇಲ್ವಿಚಾರಕರು |
| 10 |  ಕೆ. ನಾಗಪ್ಪ<br>ನಿ. ದೈಹಿಕ ಶಿಕ್ಷಕರು | 20 |  ರಾಜಪ್ಪ ಡಿ.ಎಂ.<br>ನಿ. ಉಪನ್ಯಾಸಕರು |
| 11 |  ಜಿ.ಪರಮೇಶ್ವರಪ್ಪ<br>ನಿ. ಸಹಾಯಕ ನಿರ್ದೇಶಕರು : ಕೃ.ಮಾ.ಇ. | 21 |  ರುದ್ರಯ್ಯ ಟಿ.ಎಂ.<br>ನಿ. ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ |
| 12 |  ಬಸವರಾಜು ಎನ್.ಜಿ.<br>ನಿ. ಉಪನ್ಯಾಸಕರು | 23 |  ರೇವಣಪ್ಪ ಪಿ.ಸಿ.<br>ನಿ. ಪ್ರಾಚಾರ್ಯರು |
| 14 |  ಭರತ್ ರಾಜ್ ಕೆ.ಜಿ.<br>ನಿ. ದೈಹಿಕ ಶಿಕ್ಷಕರು | | ಚುನಾವಣೆ ದಿನಾಂಕ : 25.06.2022, ಶನಿವಾರ<br>ಸಮಯ : ಬೆಳಿಗ್ಗೆ 8.00 ರಿಂದ ಸಂಜೆ 4.00ರ ವರೆಗೆ<br>ಸ್ಥಳ : ಕುವೆಂಪು ಕನ್ನಡ ಭವನ<br>ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆ. |

ಚುನಾವಣೆಗೆ ಬರುವಾಗ ಸಂಘದ ಗುರುತಿನ ಚೀಟಿ/ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್ ಅಥವಾ ಯಾವುದಾದರೂ ಪೋಟೋ ಇರುವ ಗುರುತಿನ ಚೀಟಿ ತರುವುದು.

## ನಾಗರಾಜಗೆ ಪಿಹೆಚ್‌ಡಿ ಪದವಿ

ದಾವಣಗೆರೆ, ಜೂ. 24- ತಾಲ್ಲೂಕಿನ ಹೆಚ್. ಕಲಪನಹಳ್ಳಿಯ



ಬಿ. ನಾಗರಾಜ ಅವರಿಗೆ ಕುವೆಂಪು ವಿಶ್ವವಿದ್ಯಾಲಯದಿಂದ ಪಿಹೆಚ್‌ಡಿ ಪದವಿ ಲಭಿಸಿದೆ. 'ಎ ನ್ಯುಮಿರಿಕಲ್ ಅಪ್ರೋಚ್ ಟು ಸ್ಟಡಿ ಬೌಂಡರಿ ಲೇಯರ್ ಫ್ಲೋ, ಹೀಟ್ ಅಂಡ್ ಮಾಸ್ ಟ್ರಾನ್ಸ್‌ಫರ್ ಅನಾಲಿಸಿಸ್ ಆಫ್ ನ್ಯುಟೋನಿಯನ್/ನಾನ್ - ನ್ಯುಟೋನಿಯನ್ ಫ್ಲೂಯಿಡ್ಸ್' ವಿಷಯ ಕುರಿತು ನಾಗರಾಜ ಅವರು ಮಂಡಿಸಿದ ಮಹಾಪ್ರಬಂಧಕ್ಕೆ ಕುವೆಂಪು ವಿವಿ ಈ ಪದವಿ ನೀಡಿದೆ.

ಗಣಿತ ಶಾಸ್ತ್ರ ವಿಭಾಗದ ಪ್ರೊ. ಬಿ.ಜೆ. ಗಿರೀಶ್ ಅವರ ಮಾರ್ಗದರ್ಶನದಲ್ಲಿ ನಾಗರಾಜ ಅವರು ಈ ಪ್ರಬಂಧವನ್ನು ಮಂಡಿಸಿದ್ದರು.

## ಓಶೋ ಧ್ಯಾನ ಶಿಬಿರ

ಮಾನಸಿಕ ಮತ್ತು ದೈಹಿಕ ಒತ್ತಡಗಳ ನಿವಾರಣೆಗಾಗಿ ಧ್ಯಾನ ಜೀವನ ನಡೆಸಲು ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಓಶೋ ಡೈನಾಮಿಕ್ ಧ್ಯಾನ ಶಿಬಿರ ಇಂದು ಮತ್ತು ನಾಳೆ ನಡೆಯಲಿದೆ ಎಂದು ಅರ್ಚನಾ (9738572318), ಪುಷ್ಪ (9036719573) ತಿಳಿಸಿದ್ದಾರೆ.

# ತೊನ್ನು ಬಾಧಿತರನ್ನು ಬದುಕಲು ಬಿಡಿ, ತೊನ್ನಿನೊಂದಿಗೆ ಬದುಕಲು ಕಲಿ

ಜನರಿಗೆ ತೊನ್ನು ರೋಗದ ಬಗ್ಗೆ ಅರಿವು ಮೂಡಿಸಲು, ಜನರನ್ನು ಜಾಗೃತಗೊಳಿಸಲು, ಅವರಲ್ಲಿನ ಪ್ರಶ್ನೆಗಳಿಗೆ ಉತ್ತರಿಸಲು, ತೊನ್ನು ರೋಗದ ಬಗ್ಗೆ ಇರುವ ದುಗುಡುಗಳನ್ನು ದೂರಗೊಳಿಸಲು ವಿಶ್ವ ಆರೋಗ್ಯ ಸಂಸ್ಥೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯು ಪ್ರತಿ ವರ್ಷ ಜೂನ್ 25 ರಂದು ವಿಶಿಷ್ಟ ಧ್ಯೇಯದೊಂದಿಗೆ 'ವಿಶ್ವ ತೊನ್ನು ದಿನ' ಎಂದು ಆಚರಿಸುತ್ತದೆ, ಎಂದಿನಂತೆ ಈ ವರ್ಷವೂ ಸಹ 'ತೊನ್ನಿನೊಂದಿಗೆ ಬದುಕಲು ಕಲಿ' ಎಂಬ ಧ್ಯೇಯೋದ್ದೇಶದೊಂದಿಗೆ ಆಚರಿಸುತ್ತಿದೆ.

ತೊನ್ನು ಅಥವಾ ವಿಟಲಿಗೋ ಎನ್ನುವುದು ನೋವೂ ಇಲ್ಲದ, ಜೀವಕ್ಕೆ ಅಪಾಯಕಾರಿಯೂ ಅಲ್ಲದ ಚರ್ಮದ ಒಂದು ರೋಗ ಸ್ಥಿತಿ. ಚರ್ಮದಲ್ಲಿ ಬಿಳಿ ತೇಪೆಗಳು ಮೂಡುವುದು ತೊನ್ನು ರೋಗಿಗಳಲ್ಲಿ ಕಾಣಿಸಿಕೊಳ್ಳುವ ಬಹುಮುಖ್ಯ ಲಕ್ಷಣ. ವಿಶ್ವದ 1 ಪ್ರತಿಶತ ಜನರಲ್ಲಿ ಈ ಕಾಯಿಲೆ ಇದೆ. ಈ ಹಿಂದೆ ತೊನ್ನು ರೋಗವನ್ನು 'ಶ್ವೇತ ಕುಷ್ಠ' ಎಂದು ಬಣ್ಣಿಸಲಾಗಿದೆ. ಈ ಕಾಯಿಲೆಗೆ ಹಲವು ಕಾರಣಗಳಿದ್ದರೂ ಪ್ರಮುಖವಾಗಿ ಆತ್ಮಾಘಾತಿ ಪ್ರಕ್ರಿಯೆ ಅಥವಾ ಕ್ಷೀಣಿಸುತ್ತಿರುವ ಪ್ರತಿ ರೋಧಕ ಶಕ್ತಿ ಮುಖ್ಯ ಕಾರಣವಾಗಿರುತ್ತದೆ. ಕೆಲವು ಜನರಲ್ಲಿ ಮಾತ್ರ ಅನುವಂಶೀತೆಯು ಕೂಡ ಒಂದು ಕಾರಣ.

ಇದರಿಂದ ಚರ್ಮಕ್ಕೆ ಬಣ್ಣ ನೀಡುವ ಮೆಲನಿನ್ ಉತ್ಪಾದಿಸುವ ಮೆಲನೊಸೈಟ್ ಕೋಶಗಳಿಗೆ ಹಾನಿ ಅಥವಾ ನಷ್ಟ ಉಂಟಾಗಿ ಹಾಲಿನ ಬಿಳಿಬಣ್ಣದ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ.

ಈಗಾಗಲೇ ಬೇರೆ ರೀತಿಯ ಸ್ವಯಂ ಪ್ರತಿರೋಧಕ ಅಸಹಜತೆಯ ಕಾಯಿಲೆ ಇರುವವರಲ್ಲಿ ತೊನ್ನು ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಸಾಮಾಜಿಕ ಒತ್ತಡ, ಬಿಡುವಿಲ್ಲದ ಜೀವನಶೈಲಿ, ನಿತ್ಯ ಜಂಜಾಟ, ರೋಗದ ಬಗ್ಗೆ ಜಾಸ್ತಿ ಚಿಂತಿಸುವುದು, ತಲ್ಲಣಗೊಳ್ಳುವುದು, ಪದೇ ಪದೇ ತ್ವಚೆಗೆ ಗಾಯಗಳನ್ನು ಮಾಡಿಕೊಳ್ಳು ವುದಾಗಲೀ, ಕೆಲವು ರಾಸಾಯನಿಕಗಳ ಸಂಪರ್ಕಕ್ಕೆ ಬಂದ ಸಂದರ್ಭಗಳಲ್ಲಿ ಈ ಕಾಯಿಲೆ ವರ್ಧಿಸುವ ಸಾಧ್ಯತೆ ಇರುತ್ತದೆ.

ಚರ್ಮವು ಪಂಚೇಂದ್ರಿಯಗಳಲ್ಲಿ ಒಂದು, ಇದರಲ್ಲಿನ ಒಂದು ಸಣ್ಣ ವ್ಯತ್ಯಾಸವೂ ಸಹ ಜನರನ್ನು ಆಕರ್ಷಿಸುವುದು ಸಹಜ. ಅಂತೆಯೇ 'ತೊನ್ನು ರೋಗವು' ಜನರ ಗಮನವನ್ನು ಹೆಚ್ಚು ಸೆಳೆಯುತ್ತದೆ.

ತೊನ್ನು ಎಂಬುದು ಬಾಧಿತ ವ್ಯಕ್ತಿಯನ್ನು ಭಾವನಾತ್ಮಕವಾಗಿ ಕುಗ್ಗಿಸುವಂತಹ ಒಂದು ವಿಚಾರ. ಅಲ್ಲದೆ ತೊನ್ನು ಬಾಧಿತರು ಸಮಾಜದಲ್ಲಿ ಮುಜುಗರಕ್ಕೆ, ಖಿನ್ನತೆಗೆ ಒಳಗಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಅನಕ್ಷರತೆ, ಅಪನಂಬಿಕೆ ಮತ್ತು ಕಾಯಿಲೆಯ ಬಗೆಗಿನ ತಿಳುವಳಿಕೆ ಇಲ್ಲದಿರುವುದು ಅಥವಾ ಸಾಮಾನ್ಯ ಜ್ಞಾನದ ಕೊರತೆಯಿಂದಾಗಿ ರೋಗದ ಬಗ್ಗೆ ಅನಗತ್ಯ ಗೊಂದಲವನ್ನು ಜನರಲ್ಲಿ ಉಂಟುಮಾಡಲಾಗುತ್ತದೆ.

ತೊನ್ನು ಒಬ್ಬ ಮನುಷ್ಯನ ಜೀವಿತ ಅವಧಿಯಲ್ಲಿ ಯಾವುದೇ ವಯಸ್ಸಿನಲ್ಲಿ ಆರಂಭವಾಗಬಹುದು. ಆದರೆ, ಮುಖ್ಯವಾಗಿ ಇದು 20 ರಿಂದ 30 ವರ್ಷಗಳ ಕೆಳಗಿನವರಲ್ಲಿ ಬಾಧಿಸುತ್ತದೆ. ಪುರುಷ ಮತ್ತು ಸ್ತ್ರೀ ಎರಡೂ ವರ್ಗದವರನ್ನೂ ಸಮಾನವಾಗಿ ಬಾಧಿಸುತ್ತದೆ. ತೊನ್ನುಗಳಲ್ಲಿ ಹಲವು ವಿಧಗಳು ಕಂಡು ಬರುತ್ತವೆ. ಅದರಲ್ಲಿ ದೇಹದ ಬಹು ಭಾಗಗಳಲ್ಲಿ ಹಾಲಿನ ಬಣ್ಣದ ಬಿಳಿ ಮಚ್ಚೆಗಳು ಇದ್ದರೆ ಅದಕ್ಕೆ 'ಸಾರ್ವತ್ರಿಕ ತೊನ್ನು' ರೋಗ ಎನ್ನುವರು. ಅದೇ ರೀತಿ ಒಂದೇ ಸ್ಥಳದಲ್ಲಿ ಹರಡಿದ ಬಿಳಿ ಮಚ್ಚೆ ಕಂಡು





ಬಂದರೆ 'ಫೋಕಲ್ ವಿಟಲಿಗೊ' ಅನ್ನುವರು.

ಮುಖ, ಕೈಗಳು ಅಥವಾ ಪಾದದಲ್ಲಿ ಮಾತ್ರ ಬಿಳಿ ಹಾಲಿನ ಬಣ್ಣದ ಮಚ್ಚೆಗಳು ಕಂಡುಬಂದರೆ 'ಆಕ್ರೋಫೆಸಿಯಲ್ ವಿಟಲಿಗೊ' ಅನ್ನುವರು. ತುಟಿಗಳು ಹಾಗೂ ಬೆರಳುಗಳ ತುದಿಯಲ್ಲಿ ಮಾತ್ರ ಕಂಡು ಬಂದಲ್ಲಿ 'ಲಿಪ್-ಟಿಪ್' ವಿಧ ಮತ್ತು ಬೆನ್ನು ಹುರಿಯಿಂದ ಬೆನ್ನಿನ ಆಳದೊಂದಿಗೆ ಇರುವ ಚರ್ಮದ ಪ್ರದೇಶದ ಮೇಲೆ ಕಂಡುಬಂದಲ್ಲಿ 'ಸೆಗ್‌ಮೆಂಟಲ್ ವಿಟಲ್‌ಗೊ' ಎಂದು ಕರೆಯುವರು. ಕೆಲವು ಜನರಲ್ಲಿ ಮಚ್ಚೆಗಳು ಮೊದಲು ಚಿಕ್ಕದಾಗಿದ್ದು ರೋಗ ಹೆಚ್ಚಾದಂತೆ ಇವುಗಳ ಆಕಾರ ಮತ್ತು ಸಂಖ್ಯೆಯಲ್ಲಿ ವೃದ್ಧಿಯಾಗುತ್ತದೆ.

ಈ ರೋಗಕ್ಕೆ ಹಲವು ರೀತಿಯ ಚಿಕಿತ್ಸೆಗಳಿದ್ದು, ಚಿಕಿತ್ಸೆಯಿಂದ ತ್ವಚೆಯ ಬಣ್ಣವನ್ನು ಕಾಪಾಡಿಕೊಳ್ಳಲು ಮತ್ತು ಮತ್ತಷ್ಟು ಹರಡುವಿಕೆಯನ್ನು ತಡೆಗಟ್ಟಬಹುದು. ವಿವಿಧ ರೀತಿಯ ನೇರಳಾತೀತ ಕಿರಣಗಳ ಬೆಳಕಿನ ಚಿಕಿತ್ಸೆಯನ್ನು ಕೂಡ ಕೊಡಲಾಗುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಯುವಿಎ, ಎನ್‌ಬಿ ಯುವಿಬಿ, ಪಿಯುಎ ಮತ್ತು ಪಿಯುವಿಎಎಸ್‌ಓಎಲ್ ಜೊತೆ ಜೊತೆಗೆ ಸ್ಟಿರಾಯ್ಡ್, ಟ್ಯಾಕ್ರೋಲಿಮಸ್ ಮತ್ತು ಪಿಮೆಕ್ರೋಲಿಮಸ್ ಮುಲಾಮುಗಳನ್ನು, ಪೆಪ್ಟೈಡ್ ಮುಲಾಮುಗಳನ್ನು ಹಾಗೂ ಸ್ಟಿರಾಯ್ಡ್ ಮಾತ್ರೆಗಳನ್ನು ತೊನ್ನು ಚಿಕಿತ್ಸೆಗೆ ಬಳಸಲಾಗುತ್ತದೆ. ತೊನ್ನು ರೋಗಕ್ಕೆ ವಿವಿಧ ರೀತಿಯ ಶಸ್ತ್ರಚಿಕಿತ್ಸೆ ಸಹ ಲಭ್ಯವಿದೆ. ಉದಾಹರಣೆಗೆ ಸೆಲ್ ಗ್ರಾಫ್ಟಿಂಗ್, ಮೆಲನೋಸೈಟ್ ಕಲ್ಚರ್, ಬ್ಲಿಸ್ಟರ್‌ರೋಗ್ರಫಿ ಮತ್ತು ಪಂಚ್ ಗ್ರಾಫ್ಟಿಂಗ್ ಮುಂತಾದವುಗಳನ್ನು ಮಾಡಬಹುದು. ಇತ್ತೀಚಿನ ದಿನಗಳಲ್ಲಿ ಎಕ್ಸೈಮರ್ ಲೇಸರ್ ಸಹ ಬೇಗ ತ್ವಚೆಯ ಬಣ್ಣ ಮರುಕಳಿಸಲು ಸಹಾಯ ಮಾಡುತ್ತದೆ.

ಈ ರೋಗಕ್ಕೆ ಸೂಕ್ತವಾದ ಆಹಾರವೆಂದರೆ ಮೀನು, ಪಾಲಕಸೊಪ್ಪು, ಬಾಳೆಹಣ್ಣು, ಸೋಯಾಬಿನ್, ಶೇಂಗಾ, ಕೆಂಪು ದ್ರಾಕ್ಷಿ, ಈರುಳ್ಳಿ ಮತ್ತು ಅಣಬೆ ಆಹಾರ ಪದಾರ್ಥಗಳು ಆ್ಯಂಟಿ ಎಕ್ಸಿಡೆಂಟ್ ಮತ್ತು ರೋಗವರ್ಧಿ ಶಕ್ತಿ ಇರುತ್ತದೆ.

ರೋಗಿಗಳಿಗೆ ಸ್ವಯಂ ಉಪಚಾರದ ಸಲಹೆಗಳೆಂದರೆ ಸಕಾರಾತ್ಮಕ ಭಾವನೆ ಹೊಂದಲು ದಿನನಿತ್ಯ ಯೋಗಾಸನ, ಧ್ಯಾನ ಮಾಡಬೇಕು. ಗಡಿಬಿಡಿಯ ಜೀವನ ಶೈಲಿ ಬದಲಾಯಿಸಿಕೊಳ್ಳಬೇಕು. ಗಾಯದ ಜಾಗದಲ್ಲಿ ಹೊಸ ಮಚ್ಚೆಗಳು ಕಾಣಿಸಿಕೊಳ್ಳುವುದರಿಂದ ದೇಹದ ಮೇಲೆ ಗಾಯಗಳಾಗದಂತೆ ನೋಡಿಕೊಳ್ಳಬೇಕು. ಟ್ಯಾಟೂ ಹಾಕಿಸಿಕೊಳ್ಳಬೇಡಿ ಮತ್ತು ಮದ್ಯಪಾನ, ಧೂಮಪಾನ ಮಾಡಬೇಡಿ. ಎಸ್‌ಪಿಎಫ್ 30 ಹೊಂದಿರುವ ವಿವಿಧೋದ್ದೇಶ ಸನ್ ಸ್ಕ್ರೀನ್ ಬಳಸಿ, ತ್ವಚೆಗೆ ನೇರವಾಗಿ ಸುಗಂಧ ದ್ರವ್ಯ ಅಥವಾ ರಾಸಾಯನಿಕ ಆಧಾರಿತ ದ್ರವ್ಯ ಬಳಸಬೇಡಿ.

ಈ ಕಾಯಿಲೆ ಬಗ್ಗೆ ಜನರಲ್ಲಿ ತಪ್ಪು ಗ್ರಹಿಕೆ ಹೆಚ್ಚಿದೆ. ಕೆಲವರು ಇದನ್ನು ಕುಷ್ಠರೋಗ, ಚರ್ಮ ಕ್ಯಾನ್ಸರ್ ಎಂದು ತಪ್ಪು ಗ್ರಹಿಕೆ ಹೊಂದಿರುತ್ತಾರೆ.ಇದು ಸಾಂಕ್ರಾಮಿಕ ರೋಗವಲ್ಲ. ಆದ್ದರಿಂದ ಇದರ ರೋಗಿಗಳು ಸಾಮಾನ್ಯರಂತೆ ಜೀವನ ನಡೆಸಬಹುದು. ತೊನ್ನು ರೋಗ ರೋಗಿಯ ಸ್ಪರ್ಶದಿಂದ ಹರಡುತ್ತದೆ ಎನ್ನುವ ಮೂಢನಂಬಿಕೆಯು ಜನರಲ್ಲಿದೆ. ವ್ಯಕ್ತಿಯಿಂದ ವ್ಯಕ್ತಿಗೆ ಅಥವಾ ವ್ಯಕ್ತಿಯ ಸ್ಪರ್ಶದಿಂದ ಇದು ಹರಡುವುದೇ ಇಲ್ಲ. ಈ ಕಾಯಿಲೆಯು ಹೋದ ಜನ್ಮದ ಕರ್ಮ ಫಲದಿಂದ ಬರುವುದಿಲ್ಲ. ಹಾಲು ಮತ್ತು ಹಾಲಿನ ಪದಾರ್ಥಗಳು ಉಪಯೋಗ ಮಾಡುವುದರಿಂದ ಈ ರೋಗ ಬರುವುದಿಲ್ಲ. ಈ ರೋಗಕ್ಕೆ ಯಾವುದೇ ಚಿಕಿತ್ಸೆ ಇಲ್ಲ ಎಂಬ ತಪ್ಪು ಸಂದೇಶವು ಸಹ ಜನರಲ್ಲಿ ಹರಿದಾಡುತ್ತಿದೆ ಹಾಗೂ ಇಂತಹ ಕಲ್ಪಿತ ಸಂದೇಶಗಳಿಗೆ ಕಿವಿಗೊಡಬಾರದು. ತೊನ್ನು ರೋಗ ಇರುವ ವ್ಯಕ್ತಿಗಳು ಖಿನ್ನತೆ ಮತ್ತು ಬೇಸರಕ್ಕೆ ಒಳಪಡುವ ಅಗತ್ಯವಿಲ್ಲ. ತಲ್ಲಣಗೊಳ್ಳದೆ ನೀವು ನಿಮ್ಮ ಹತ್ತಿರದ ಚರ್ಮ ತಜ್ಞರನ್ನು, ವೈದ್ಯರನ್ನು ಸಂಪರ್ಕಿಸಿ ಸೂಕ್ತವಾದ ಸಲಹೆ ಪಡೆಯಿರಿ.

'ನಿಮ್ಮ ತ್ವಚೆ ನಿಮ್ಮ ಸಂಪತ್ತು' ಹಾಗಾಗಿ ನೀವು ಅದನ್ನು ಕಾಪಾಡಿಕೊಳ್ಳಬೇಕು. 'ಬೆಳ್ಳಗಿರೋದೆಲ್ಲ ಹಾಲಲ್ಲ' ಎಂಬ ನಾಡ ನುಡಿಯಂತೆ ಎಲ್ಲಾ ಬಿಳಿ ಮಚ್ಚೆಗಳು ಕೂಡ ತೊನ್ನು ರೋಗದ ಸಂಕೇತವಲ್ಲ. ಆದ್ದರಿಂದ ನಿಮಗೆ ಸಂಶಯವಿದ್ದರೆ, ನಿಮ್ಮಲ್ಲಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಸಂಕೋಚಪಡದೆ ಹತ್ತಿರದ ಚರ್ಮರೋಗ ವೈದ್ಯರನ್ನು ಸಂಪರ್ಕಿಸಿ ನಿಮ್ಮ ಸಂಶಯವನ್ನು ದೂರ ಮಾಡಿಕೊಳ್ಳಿ, ಸೂಕ್ತ ಸಲಹೆ ಮತ್ತು ಚಿಕಿತ್ಸೆ ಪಡೆದುಕೊಳ್ಳಿ. ಬನ್ನಿ ಎಲ್ಲರೂ ಕೈ ಜೋಡಿಸಿ ತೊನ್ನು ರೋಗದ ಬಗ್ಗೆ ಇರುವ ಮೌಢ್ಯತೆ ಹೋಗಲಾಡಿಸಲು ಪ್ರಯತ್ನ ಮಾಡೋಣ..

**ಡಾ|| ಸೂಗಾರೆಡ್ಡಿ,**
ಚರ್ಮರೋಗ ವಿಭಾಗದ ಮುಖ್ಯಸ್ಥರು,
ಜೆಜೆಎಂ ಮೆಡಿಕಲ್ ಕಾಲೇಜ್,
ದಾವಣಗೆರೆ.



**ಡಾ|| ಸರ್ವೇಶ ಕುಮಾರ್ ಎನ್**
ಚರ್ಮರೋಗ ಸ್ನಾತಕೋತ್ತರ ವಿದ್ಯಾರ್ಥಿ, ಜೆಜೆಎಂ ಮೆಡಿಕಲ್ ಕಾಲೇಜ್, ಮೊ: 9741411503

## ವಿದ್ಯಾನಗರ ರೋಟರಿಯಿಂದ ಆರೋಗ್ಯ ತಪಾಸಣೆ



ದಾವಣಗೆರೆ, ಜೂ. 24 - ವಿದ್ಯಾನಗರ ರೋಟರಿ ಹಾಗೂ ಇನ್ನರ್‌ವ್ಹೀಲ್ ಸಂಸ್ಥೆಯಿಂದ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಡಾ. ಶಿವಕುಮಾರ್ ಮತ್ತು ಡಾ. ನಿತೀಶ್ ಕೊಟ್ರಪ್ಪ ಅವರು ಉಚಿತವಾಗಿ ತಪಾಸಣೆ ನಡೆಸಿದರು. ರೋಟರಿ ಅಧ್ಯಕ್ಷರಾದ ಅಂಜನಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಗಿರಿಜಾ ಬಿಲ್ಲಳ್ಳಿ, ಹೆಚ್. ದಯಾನಂದ್, ರೋಟರಿ ರವಿಕುಮಾರ್ ಮತ್ತು ಇತರರು ಭಾಗವಹಿಸಿದ್ದರು.

## ತರಬೇತಿ ಭತ್ಯೆಗೆ ಅರ್ಜಿ ಆಹ್ವಾನ

ದಾವಣಗೆರೆ, ಜೂ. 24 - ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ಭತ್ಯೆಗೆ ಅರ್ಹ ಕಾನೂನು ಪದವೀಧರರಿಗೆ ಅರ್ಜಿಗಳನ್ನು ಅಹ್ವಾನಿಸಲಾಗಿರುತ್ತದೆ.

ಅರ್ಹ ಅಭ್ಯರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ 46, ಎರಡನೇ ಮಹಡಿ, ಜಿಲ್ಲಾಡಳಿತ ಭವನ ಕರೂರು ರಸ್ತೆ, ದಾವಣಗೆರೆ-577006. ಇಲ್ಲಿ ಕಛೇರಿಯ ವೇಳೆಯಲ್ಲಿ ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಜುಲೈ 20 ರೊಳಗಾಗಿ ಸಲ್ಲಿಸಬಹುದು.

## ಹರಪನಹಳ್ಳಿ: ಅಜ್ಜಿಹಬ್ಬ

(3ನೇ ಪುಟದಿಂಧ) ಈ ಸಂದರ್ಭದಲ್ಲಿ ಮುಖಂಡರಾದ ಆಲೂರು ಚೌಡಪ್ಪ, ನಿಟ್ಟೂರು ದೊಡ್ಡ ಹಾಲಪ್ಪ, ಕೆ. ಅಂಜಿನಪ್ಪ, ಮಂಡಕ್ಕಿ ಸುರೇಶ್,ಬಿ. ವಿರುಪಾಕ್ಷಿ, ತಳವಾರ ನಾಗಪ್ಪ, ರಾಯದುರ್ಗದ ದುರುಗಪ್ಪ, ಪಟ್ನಾಮದ ಹಾಲಸಿದ್ದಪ್ಪ, ಪುರಸಭೆ ಸದಸ್ಯ ಹೆಚ್. ಕೊಟ್ರೇಶ್, ಕಮ್ಮಾರ ದೊಡ್ಡ ಹಾಲಪ್ಪ, ಗಿಡ್ಡಳ್ಳಿ ನಿಂಗಪ್ಪ, ಮ್ಯಾಕಿ ದುರುಗಪ್ಪ, ಪಟ್ನಾಮದ ದುರುಗಪ್ಪ, ದ್ಯಾಮಜ್ಜಿ ಹನುಮಂತಪ್ಪ, ಹೊರಕೇರಿ ರಂಗಪ್ಪ, ಬಡಿಗೇರ ನಾಗರಾಜ್, ಮಂಜುನಾಥ್, ವೀರೇಶ್ ಹಾಗೂ ಮೂರು ಕೇರಿಯ ದೈವಸ್ಥರು ಸರ್ವ ಭಕ್ತ ಬಂಧು ಸಮೂಹ ಹಾಜರಿದ್ದರು.

## ಶ್ರೀಮಂತರ ಮೇಲೆ ತೆರಿಗೆ

(1ನೇ ಪುಟದಿಂದ) ಹೊರೆ ತಗ್ಗಿಸುವುದು ಈ ತೆರಿಗೆಯ ಉದ್ದೇಶ ಎಂದವರು ತಿಳಿಸಿದ್ದಾರೆ.

ದೇಶ ದಿವಾಳಿಯಾಗುವು ದನ್ನು ತಡೆಯುವುದು ಎರಡನೇ ಉದ್ದೇಶ. ಹಿಂದಿನ ಇಮ್ರಾನ್ ಖಾನ್ ಸರ್ಕಾರದ ಅದಕ್ಷತೆ ಹಾಗೂ ಭ್ರಷ್ಟಾಚಾರದಿಂದ ಈ ಪರಿಸ್ಥಿತಿ ಉಂಟಾಗಿದೆ ಎಂದವರು ತಿಳಿಸಿದ್ದಾರೆ.

ಷರೀಫ್ ಹೇಳಿಕೆಯ ನಂತರ ಪಾಕಿಸ್ತಾನದ ಷೇರು ವಿನಿಮಯ ಪೇಟೆಯಲ್ಲಿ ಶೇ.4.81ರ ಕುಸಿತ ಉಂಟಾಗಿದೆ.

## ದೇವರಬೆಳಕೆರೆ : 70 ಜನರಿಂದ ರಕ್ತದಾನ



ಮಲೇಬೆನ್ನೂರು, ಜೂ.24- ದೇವರಬೆಳಕೆರೆ ಗ್ರಾಮದ ಪ್ರಾಥಮಿಕ ಆರೋಗ್ಯದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಹಮ್ಮಿಕೊಂಡಿದ್ದ ಸ್ವಯಂ ರಕ್ತದಾನ ಶಿಬಿರದಲ್ಲಿ 75 ಜನರು ರಕ್ತದಾನ ಮಾಡಿ ಗಮನ ಸೆಳೆದರು. ಗ್ರಾ.ಪಂ. ಸದಸ್ಯರು ಹಾಗೂ ಆಶಾ ಕಾರ್ಯಕರ್ತರು ರಕ್ತದಾನ ಮಾಡಿ ಸ್ಫೂರ್ತಿ ನೀಡಿದರು. ಶಿಬಿರದಲ್ಲಿ ಗ್ರಾ.ಪಂ. ಅಧ್ಯಕ್ಷ ಜಗದೀಶ್ ಟಿಹೆಚ್‌ಓ ಚಂದ್ರಮೋಹನ್, ವೈದ್ಯಾಧಿಕಾರಿ ಡಾ. ನವ್ಯ, ಗ್ರಾ.ಪಂ. ಉಪಾಧ್ಯಕ್ಷ ಮಹೇಶ್ವರಯ್ಯ, ಜಿಲ್ಲಾ ಆರೋಗ್ಯ ನಿರೀಕ್ಷಕ ಎಂ.ವಿ. ಹೊರಕೇರಿ, ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ, ದಾವಣಗೆರೆ ಬ್ಲಡ್ ಬ್ಯಾಂಕ್‌ನ ರಾಘವೇಂದ್ರ, ಲೋಕೇಶ್, ಪ್ರಾಥಮಿಕ ಆರೋಗ್ಯ ಕೇಂದ್ರದ ಆದರ್ಶ, ಪರಶುರಾಮ್, ಲಕ್ಷ್ಮಿ, ಸಬೀತಮ್ಮ ರಾಮಾನಾಯ್ಕ ಭಾಗವಹಿಸಿದ್ದರು.

**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಛಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಸೂರ್ಯ ನವೋದಯ**
(4ನೇ ಮತ್ತು 5ನೇ ತರಗತಿ ಮಕ್ಕಳಿಗೆ)
ತರಗತಿಗಳು ಈಗಷ್ಟೇ ಪ್ರಾರಂಭವಾಗುತ್ತಿವೆ. ಸ್ಥಳ. K.S.S ಕಾಲೇಜು ಸರಸ್ವತಿ ಬಡಾವಣೆ ದಾವಣಗೆರೆ. ಸಮಯ ಬೆಳಿಗ್ಗೆ 6.15 ರಿಂದ 7.45
ಸ್ಥಳ : ಕಾಮ್ರೆಡ್ ಲೆನಿನ್ ಶಾಲೆ ಡಾಂಗೇ ಪಾರ್ಕ್ ಹತ್ತಿರ, ದಾವಣಗೆರೆ. ಸಮಯ ಸಂಜೆ 5.15 ರಿಂದ 6.45
ಶ್ರೀ ಸುರೇಷ ಸಿ. ಮುರಗಿ Msc. B.Ed
99028 24909, 98447 48763

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರದಲ್ಲಿ 2ನೇ ಬಸ್ ಸ್ಟಾಪ್‌ನಲ್ಲಿ 30x60 ಪಶ್ಚಿಮ. ವಿದ್ಯಾನಗರ ಹಳೇ ಪೊಲೀಸ್ ಠಾಣೆ ಎದುರು, 40x60 ದಕ್ಷಿಣ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಮನೆಗಳು ಮಾರಾಟಕ್ಕಿವೆ**
ರಂಗನಾಥ ಬಡಾವಣೆ ಕಾರ್ನರ್ ಪೂರ್ವ (ಮೇಲೆ ಕೆಳಗೆ) 25x30, ಪೂರ್ವ 40x60 ಡುಪ್ಲೆಕ್ಸ್, S.S 'ಎ' ಬ್ಲಾಕ್ ಕಾರ್ನರ್ ಪೂರ್ವ 23x43 (ಮೇಲೆ ಕೆಳಗೆ), ಶಿವ-ಪಾರ್ವತಿ ಬಡಾವಣೆ ಉತ್ತರ 30x46 (ಮೇಲೆ ಕೆಳಗೆ)
ಐಗೂರು ವಿಜಯಕುಮಾರ್
99457 02495

**ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ**
#91/99/537, 'ತರಳಬಾಳು ಕೃಪ', 1ನೇ ಮೇನ್, 5ನೇ ಕ್ರಾಸ್, 'ಎ' ಬ್ಲಾಕ್, ಡಿಸಿಎಂ ಟೌನ್‌ಶಿಪ್ ದಾವಣಗೆರೆ.
94807-12538, 98864-64267

**ಮನೆಯಲ್ಲಿ ನೀರು ಸೋರುವುದಕ್ಕೆ ಪರಿಹಾರ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್
81050 40110

**ಮನೆ ಬಾಡಿಗೆಗಿದೆ**
ಮೂರು ಬೆಡ್ ರೂಮಿನ ಮನೆ ಇಂಡಿಪೆಂಡೆಂಟ್ ಮನೆ ಬಾಡಿಗೆಗಿದೆ. ವಿಳಾಸ 8ನೇ ಕ್ರಾಸ್, ಕುವೆಂಪು ನಗರ, ಹಳೇ RTO ಹತ್ತಿರ.
ಮೊ : 78994 53444

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ ಸಿಗುತ್ತದೆ**
ಎಸ್.ಎಸ್ ಬಡಾವಣೆ 'ಬಿ' ಬ್ಲಾಕ್, 2ನೇ ಮೇನ್, ಡೋರ್ ನಂ. 3843ನಲ್ಲಿ ಎರಡು ಬೆಡ್ ರೂಂ (ಒಂದಕ್ಕೆ ಅಟ್ಯಾಚ್ Toilet) ಇರುವ ಬೋರ್‌ವೆಲ್ ಮತ್ತು ಮುನ್ಸಿಪಲ್ ನೀರಿನ ಸೌಕರ್ಯವಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಸಿಗುತ್ತದೆ.
(ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ :
94839 89839, 93432 04969

**ಮಾರಾಟಕ್ಕಿದೆ FOR SALE**
2019ರ ಮಾಡೆಲ್‌ನ Innova ಕಾರು ಮಾರಾಟಕ್ಕೆ ಇದೆ.
ಆಸಕ್ತರು ಸಂಪರ್ಕಿಸಿ.
72599 83162

**ಮಳಿಗೆ ಬಾಡಿಗೆಗೆ ಇದೆ**
ಜನತಾ ಬಜಾರ್ ರಸ್ತೆ ಬ್ರಾಹ್ಮಣ ಹಾಸ್ಟೆಲ್ ಎದುರು 11x16 ಅಡಿ ಅಳತೆಯ ಮಳಿಗೆ ಬಾಡಿಗೆಗೆ ಇದೆ
ಸಂಪರ್ಕಿಸಿ :
88843 79096, 97391 02088

**ಸರ್ಕಾರಿ ನೌಕರರ KHB ಸೈಟುಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರರ ಬಡಾವಣೆ (ಬೈಪಾಸ್) ಪೂರ್ವ 30x40 ಅಕ್ಕ-ಪಕ್ಕ, 40x60, KHB ಕಾಲೋನಿ ದಕ್ಷಿಣ (ಡಬಲ್ ರೋಡ್) 40x60, M.B ಸಿಟಿ ಹಿಂಭಾಗ ಪಶ್ಚಿಮ 30x40 ಅಕ್ಕ-ಪಕ್ಕ.
ಐಗೂರು ವಿಜಯಕುಮಾರ್
99457 02495

**ನಾರ್ಥ್ ಇಂಡಿಯನ್**
ವೆಜ್ ರೆಸ್ಟೋರೆಂಟ್‌ಗೆ ವೇಟರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
87488 17276

**ಮನೆ ಮಾರಾಟಕ್ಕೆ**
ಸರಸ್ವತಿ ನಗರ 40x60, 30x40, ಶಕ್ತಿನಗರ 30x45, ಜಯನಗರ 25x38 ಡಬಲ್ ಫ್ಲೋರ್, ರಾಜೇಂದ್ರ, ಬಡಾವಣೆ 30x40, 20x30 ಮನೆಗಳು ಮಾರಾಟಕ್ಕೆ.
ಏಜೆಂಟ್ : ಶಾಂತಪ್ಪ ಪೂಜಾರಿ
99647 29123

**ಜಾಗ ಬಾಡಿಗೆಗೆ / ಲೀಸ್‌ಗೆ ಇದೆ**
3000 ಚದರ ಅಡಿಯಲ್ಲಿ ಕೂಲಿಂಗ್ ಶೀಟ್ ಹಾಕಿರುವ 1st ಫ್ಲೋರ್ ಜಾಗ ಬಾಡಿಗೆಗೆ / ಲೀಸ್‌ಗೆ ಇದೆ.
ಸಂಪರ್ಕಿಸಿ : ಮೋರ್ ಹಿಂಭಾಗ, ಹದಡಿ ರಸ್ತೆ, ದಾವಣಗೆರೆ.
99860 86588

**ನೀರಿನ ಟ್ಯಾಂಕರ್ ತಿಂಗಳ ಬಾಡಿಗೆಗಿವೆ**
5000 ಲೀಟರ್ ನೀರಿನ ಟ್ಯಾಂಕರ್‌ಗಳು ತಿಂಗಳ ಬಾಡಿಗೆಗೆ ಇವೆ.
ಸಂಪರ್ಕಿಸಿ :
ಮೊ : 84969 06999

**ಮನೆ ಬಾಡಿಗೆಗೆ ಇವೆ**
ತರಳಬಾಳು ಬಡಾವಣೆಯಲ್ಲಿ 3 ಬೆಡ್ ರೂಂ ಮತ್ತು 2 ಬೆಡ್ ರೂಂ ಪೂರ್ವ ದಿಕ್ಕಿಗೆ ಇವೆ.
ವೆಜ್ & ನಾನ್ ವೆಜ್
97418 11694

**ಮನೆ ಬಾಡಿಗೆಗೆ ಇದೆ**
ವಿನೋಬ ನಗರ 4ನೇ ಮೇನ್‌ನಲ್ಲಿ 1,2,3 ಬೆಡ್ ರೂಂ ಮತ್ತು ಫರ್ನೀಚರ್ ಇರುವ ಮನೆ ಖಾಲಿ ಇದೆ.
Cell No. 70193 85713

**ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ ಮತ್ತು ರಾಣೇಬೆನ್ನೂರು ಸುತ್ತ-ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI, PF ಸೌಲಭ್ಯ ಇದೆ.
ಹೈ ಅಲರ್ಟ್ ಸೆಕ್ಯೂರಿಟಿ ಸರ್ವಿಸ್.
ಮುಸ್ಲಿಂ ಹಾಸ್ಟೆಲ್, ದಾವಣಗೆರೆ
78990 15677, 96113 94063

**RENT BHK (GF)**
Vidyanagar 2nd Bus Stop Out House 24x7 water Ground Floor North Phase Safety & Suitable for single family for vegeterian for rent only.
Contact :
94483 45584

**ಸೈಟು ಮಾರಾಟಕ್ಕಿದೆ**
(ಪೋದಾರ್ ಸ್ಕೂಲ್) ಶಾಮನೂರಿನ Podar School ಹತ್ತಿರ 30x40 (ದಕ್ಷಿಣ) Site. ಮಾರಾಟಕ್ಕಿವೆ.
ಸಂಪರ್ಕಿಸಿ :
95918 29780, 80731 78139

**ಬೇಕಾಗಿದ್ದಾರೆ**
ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಭಾರತ್ ಪೆಟ್ರೋಲಿಯಂ ಪೆಟ್ರೋಲ್ ಬಂಕ್,
ಐಟಿಐ ಕಾಲೇಜ್ ಎದುರು ಹದಡಿ ರಸ್ತೆ, ದಾವಣಗೆರೆ

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಬನಶಂಕರಿ ಬಡಾವಣೆಯಲ್ಲಿ 30x50, 30x60, 30x46, 40x50, 30x55 ಇನ್ನೂ ಇತರೆ ಅಳತೆಯ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
97432 09680

**ಬೇಕಾಗಿದ್ದಾರೆ**
ರೂಂ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
ನ್ಯೂ ನಂದಿ ಲಾಡ್ಜ್
ಕೆ.ಆರ್. ರಸ್ತೆ, ದಾವಣಗೆರೆ.
ಭೇಟಿಯ ಸಮಯ: ಸಂಜೆ: 5 ರಿಂದ 7
08192 277187
08192 276411

**WANTED**
Computer operator for billing. Minimum 2 years Experience in any software billing.
Boys Helpers wanted.
Sajjan super mart
99009 71888

**ಯುಕ್ತ ಕೌಶಲ್ಯ ತರಬೇತಿ ಕೇಂದ್ರ**
ಹಾಗೂ ಕಲರ್ಸ್ ಟೆಕ್ನಾಲಜಿ ಇವರುಗಳ ಸಹಯೋಗದಿಂದ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಅರ್ಜಿ ಆಹ್ವಾನ
https://forms.gle/eJceAjgM4Mu6Fc887
ಕೊನೆಯ ದಿನಾಂಕ. 30.6.2022 ಹೆಚ್ಚಿನ ಮಾಹಿತಿಗಾಗಿ
87470 68888, 63662 73089
88677 54672

**ಸಿಂಗಲ್ ಬೆಡ್ ರೂಂ ಮನೆ ಲೀಸ್‌ಗೆ ಇದೆ**
1ನೇ ಮಹಡಿ, 1ನೇ ಮೇನ್, 3ನೇ ಕ್ರಾಸ್, ನಿಟುವಳ್ಳಿ ಹೊಸ ಬಡಾವಣೆ, ದಾವಣಗೆರೆ.
76768 55957

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಮತ್ತು ಸೆಕ್ಯೂರಿಟಿ ಬೇಕಾಗಿದ್ದಾರೆ.
ಸಂಬಳ 9000 ಊಟ, ರೂಂ ಉಚಿತ.
ಸಂಪರ್ಕಿಸಿ:
97400 98047, 97400 98064

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED**
Career opportunity in 150 years old indian organisation lokking for
CONSULTANT MANAGERS
5+ years professional experience in any field. registration for call
98444 53666

**House For Sale**
60 x 30 Measuring East Face #2427/A, 10th Main, 2nd Cross, MCC 'A' Block, Davanagere.
Contact
78921 13752, 98454 58294

**ಬೇಕಾಗಿದ್ದಾರೆ**
ಹಾರ್ಡ್‌ವೇರ್ ಅಂಗಡಿಯಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗಿಯರು ಮತ್ತು ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. 19 ರಿಂದ 26 ವಯಸ್ಸಿನವರು ಸಂಪರ್ಕಿಸಿ.
63612 16221

**ಸೈಟ್ ಮಾರಾಟಕ್ಕೆ ಇದೆ**
ದಾವಣಗೆರೆ ಹದಡಿ ರಸ್ತೆಯಲ್ಲಿ ಸಮ್ಯಕ್ ಪ್ಲೈವುಡ್ ಹಿಂಭಾಗ 80x124 Sq.Ft ಉತ್ತರ ದಿಕ್ಕಿನ ಸೈಟ್ ಮಾರಾಟಕ್ಕೆ ಇದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಸಂಪರ್ಕಿಸಿ :
98440 64841

**WANTED TEACHERS**
BA, D.ED, B.Com, B.Sc, B.Ed, NTC ತರಬೇತಿ ಹೊಂದಿದ ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
SJM Public School,
Nittuvalli, Davanagere.
98806 86866, 82176 07934
99011 22804, 63609 63763

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**ಮನೆ ಮತ್ತು ಕಾಂಪ್ಲೆಕ್ಸ್ ಮಾರಾಟಕ್ಕಿದೆ**
ಬಾಲಾಜಿ ಬಡಾವಣೆಯಲ್ಲಿ 40 ಅಡಿ ರೋಡ್‌ಗೆ ಪೂರ್ವ-ಉತ್ತರ ಕಾರ್ನರ್ ಸೈಟ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 8 ಚದುರ ಕಾಂಪ್ಲೆಕ್ಸ್ ಮತ್ತು ಕಾರ್ ಪಾರ್ಕಿಂಗ್ ಫಸ್ಟ್ ಫ್ಲೋರ್‌ನಲ್ಲಿ 13 ಚದುರದ 2 ಬೆಡ್ ರೂಂನ ಹೊಸ ವಾಸದ ಮನೆ ಮಾರಾಟಕ್ಕಿದೆ.
98448 82366

**REQUIRED**
BOYS/ GIRLS HOSTEL WARDEN, DRIVER
LOCATION: DAVANGERE
CONTACT :
82176 27780, 91108 26144

**ನಯನ ಲೇಡೀಸ್ ಟೈಲರ್ & ಬ್ಯೂಟಿಕ್ ಫ್ಯಾಷನ್ ಡಿಸೈನಿಂಗ್**
ನಮ್ಮಲ್ಲಿ ಸೀರೆಗಳಿಗೆ ಜಿಗ್ ಜಾಗ್ ಫಾಲ್ಸ್ ಹಾಗೂ ಕುಚ್ಚು ಹಾಕಿಕೊಡಲಾಗುತ್ತದೆ, ಮದುವೆ ಹಾಗೂ ಶುಭ ಸಮಾರಂಭಗಳಿಗೆ ಹ್ಯಾಂಡ್ ವರ್ಕ್ & ಮಷಿನ್ ವರ್ಕ್ ಬ್ಲೌಸ್ ಮಾಡಿಕೊಡಲಾಗುತ್ತಿದೆ. ಎಲ್ಲಾ ತರಹದ ಪ್ಯಾನ್ಸಿ ಡ್ರೆಸ್‌ಗಳನ್ನು ಹೊಲೆದುಕೊಡಲಾಗುತ್ತಿದೆ.
60 ಅಡಿ ರಿಂಗ್ ರೋಡ್ ಶ್ರೀನಿವಾಸ್ ನಗರ 10 ನೇ ಕ್ರಾಸ್ ದಾವಣಗೆರೆ 577004

**ಮಾರಾಟಕ್ಕಿದೆ**
ದಾವಣಗೆರೆಯಿಂದ 12 ಕೀಮಿ. ದೂರದಲ್ಲಿ ರಾಗಿಮಸಲವಾಡದ ರೋಡ್ ಪಕ್ಕದಲ್ಲಿ 1 ಎಕರೆ ಹೊಲ ಮಾರಾಟಕ್ಕಿದೆ. 15 ಲಕ್ಷಕ್ಕೆ
96638 69555

**ಮಳಿಗೆ ಬಾಡಿಗೆಗೆ ಇದೆ**
400 ಮತ್ತು 800 ಚ.ಅಡಿವುಳ್ಳ ಮಳಿಗೆ 2ನೇ ಫ್ಲೋರ್ ಶಾಮನೂರು ರೋಡ್, ಬೂಸ್ನೂರ್ ಸ್ಟಾಪ್
90604 24161, 81235 05430

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಬಿ' ಬ್ಲಾಕ್, 11ನೇ ಮೇನ್, 3ನೇ ಕ್ರಾಸ್ ಬಾಪೂಜಿ ಹೈಸ್ಕೂಲ್ ಹತ್ತಿರ, ಮೊದಲನೇ ಮಹಡಿಯಲ್ಲಿ ಉತ್ತರ ದಿಕ್ಕಿಗೆ ವಾಸ್ತು ಪ್ರಕಾರ ಇರುವ ಬೋರ್‌ವೆಲ್ ಮತ್ತು ನಲ್ಲಿ ನೀರಿನ ವ್ಯವಸ್ಥೆ ಇರುವ ಎರಡು ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ.
94480 46613

**WANTED**
1. Staff Nurses
2. Lab Technician
*Pls Contact :*
98440 65638

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**FOR RENT**
Size Shop 13x12 & 30x40 Godown 540/1/2, B.T Galli Chowdrambika Road, Near Clock Tower, Dvg. OR Size Shop Enter 5x6 & 30x40 Ground & First Floor 30x40.
98865 57828

**LEWA**
Proffessional Makeup Artist Course & Beauty Courses Conducting here
Contact No :
81971 79414, 78924 68118

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**ನರ್ಸ್ ಬೇಕಾಗಿದ್ದಾರೆ**
ಕ್ಲಿನಿಕ್‌ನಲ್ಲಿ ಕೆಲಸ ಮಾಡಲು ನರ್ಸ್ ಬೇಕಾಗಿದ್ದಾರೆ.
ಸಮಯ 10 ರಿಂದ 5 ರವರೆಗೆ
ಸಂಪರ್ಕಿಸಿರಿ :
94804 79833, 79759 08992

**Work From Home**
**Male/ Female,**
**Full / Part time** Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**SPECIAL COACHING**
PUC Failed Students 100% Result
K-CET, NEET
Long Term Coaching
Hostel Facility Available
SINCHAN COACHING CENTER
Near SBI ATM, Ram & Co Circle, Davangere
8861445913, 9019580600

**II PU TUITION SUPPLEMENTARY**
SCIENCE COMMERCE 100% Result
K-CET, NEET
Long Term Coaching
WINNERS CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9886997892, 9148596892

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಕೆಲಸಕ್ಕೆ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ಅನುಭವವುಳ್ಳವರು ಹಾಗೂ ದಾವಣಗೆರೆ ನಗರ ವಾಸಿಗಳಿಗೆ ಆದ್ಯತೆ. ಸಂಪರ್ಕಿಸಿ :
77602 68105

**SSLC/PUC/ITI/Degree ಪಾಸ್-ಫೇಲ್ ಮುಂದೇನು...**
ಡಿಪ್ಲೋಮಾ ಇನ್ ಪೇಷೆಂಟ್‌ಕೇರ್ ನರ್ಸಿಂಗ್-2 ವರ್ಷ, ಕೇವಲ 6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡುವ ಅವಕಾಶ. ಉಚಿತ ಯುನಿಫಾರ್ಮ್ & ಪುಸ್ತಕ ಸಂಪರ್ಕಿಸಿ : ಗಂಗೋತ್ರಿ ಕಮ್ಯುನಿಟಿ ಕಾಲೇಜ್, ಜಯದೇವ ಸರ್ಕಲ್ ಹತ್ತಿರ, ಲಾಯರ್ ರೋಡ್, ದಾವಣಗೆರೆ.
ಫೋ. : 86602 35013

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**WANTED**
Accountant, Network Engineer, In Premise/Field Technician, Sales Manager/ Executives, HR, Computer and Office Job. Software Tester and Developer
98444 92888

# ಪ್ರಚಾರದ ಗೀಳಿಗಾಗಿ ಹಗುರ ಹೇಳಿಕೆ ಸಲ್ಲದು



ದಾವಣಗೆರೆ, ಜೂ. 24- ಕೇವಲ ಪ್ರಚಾರದ ಗೀಳಿಗಾಗಿ ದೇಶದ ಅತ್ಯುನ್ನತ ಸಾಂವಿಧಾನಿಕ ರಾಷ್ಟ್ರಪತಿ ಹುದ್ದೆ ಬಗ್ಗೆ ಕ್ಷುಲ್ಲಕ, ಹಗುರವಾಗಿ ಹೇಳಿಕೆ ನೀಡುವುದು ಅಕ್ಷಮ್ಯ ಎಂದು ಬಿಜೆಪಿ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಎನ್. ರಾಜಶೇಖರ್ ಅವರು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಗೆ ತಿರುಗೇಟು ನೀಡಿದ್ದಾರೆ.

ತಾವು ಪ್ರಚಾರದ ಗೀಳಿನ ಭರದಲ್ಲಿ ಸಾಂವಿಧಾನಿಕ ಹುದ್ದೆ ಬಗ್ಗೆ ಹಗುರವಾಗಿ ಮಾತನಾಡಿರುವುದರ ಜೊತೆಗೆ ದೇಶದ ಬುಡಕಟ್ಟು ಜನಾಂಗದವರನ್ನು ಹಾಗೂ ಮಹಿಳೆಯರನ್ನು ಅವಮಾನಿಸಿದ್ದೀರಿ.

ರಾಷ್ಟ್ರಪತಿ ಹುದ್ದೆ ತಮ್ಮಂತಹ ಅರೆಪ್ರಜ್ಞಾವಂತ ರಾಜಕಾರಣಿಗಳಿಗೆ ಉತ್ಸವಮೂರ್ತಿ ಹುದ್ದೆಯಾಗಿಯೇ ಕಾಣುತ್ತದೆ. ಆದರೆ ವಾಸ್ತವವಾಗಿ ರಾಷ್ಟ್ರಪತಿಗಳು ದೇಶದ ಮೂರು ಸೇನೆಗಳನ್ನು ಮುನ್ನಡೆಸುವ ಮುಖ್ಯಸ್ಥರಾಗಿದ್ದಾರೆ, ದೇಶದ ಯಾವುದೇ ಸಾಂವಿಧಾನಿಕ ನಿಯಮಗಳಿಗೆ ಅಂತಿಮ ಅಂಕಿತ ಹಾಕುವುದು ರಾಷ್ಟ್ರಪತಿಗಳೇ ಆಗಿರುತ್ತಾರೆ.

ದೇಶದ ಮುಖ್ಯ ನ್ಯಾಯಾಧೀಶರನ್ನು ನೇಮಿಸುವುದು, ಐ.ಎ.ಎಸ್. ನಂತಹ ಉನ್ನತ ಅಧಿಕಾರಿಗಳನ್ನು ನೇಮಕ ಮಾಡುವುದು, ವಜಾ ಮಾಡುವಂತಹ ಅಧಿಕಾರ ಕೇವಲ ರಾಷ್ಟ್ರಪತಿಗಳಿಗೆ ಇರುತ್ತದೆ. ಅಷ್ಟೇ ಅಲ್ಲದೇ ಪ್ರಧಾನ ಮಂತ್ರಿಗಳಿಗೆ ಹಾಗೂ ಪ್ರಧಾನ ಮಂತ್ರಿ ಮಂಡಲಕ್ಕೆ ತಿಳಿಹೇಳುವ ಹಕ್ಕು ಕೂಡ ಇವರಿಗೆ ಮಾತ್ರ ಇರುತ್ತದೆ. ಇಡೀ ದೇಶದ ಕಾರ್ಯಾಂಗ ವ್ಯವಸ್ಥೆ ರಾಷ್ಟ್ರಪತಿಗಳ ಅಧೀನದಲ್ಲಿ ಇರುತ್ತದೆ. ಇಂತಹ ಸಾಂವಿಧಾನಿಕ ಹುದ್ದೆ ಬಗ್ಗೆ ಮಾತನಾಡುವಾಗ ಎಚ್ಚರವಿರಲಿ ಎಂದು ಹೇಳಿದ್ದಾರೆ.

ಕೆ.ಆರ್.ನಾರಾಯಣನ್ ಅವರನ್ನು ಕೇವಲ ದಲಿತರ ಓಟಿನ ಆಸೆಗಾಗಿ ರಾಷ್ಟ್ರಪತಿಯನ್ನಾಗಿ ಮಾಡಿದ್ದೀರಾ, ಅವರನ್ಯಾಕೆ ರಾಷ್ಟ್ರಪತಿ ಬದಲಾಗಿ ಪ್ರಧಾನಿ ಮಾಡಲಿಲ್ಲ. ಅಂದು ನಿಮ್ಮ ಪಕ್ಷ ದಲಿತರನ್ನು ತಪ್ಪು ದಾರಿಗೆ ಎಳೆಯಿತು ಎಂಬುದನ್ನು ತಾವೇ ಉತ್ತರಿಸಬೇಕು.

ಗೋವಿಂದ ಕಾರಜೋಳ ಅಥವಾ ಅರವಿಂದ ಲಿಂಬಾವಳಿಯವರಂತಹ ಶೋಷಿತ ವರ್ಗದವರಿಗೆ ಮುಖ್ಯಮಂತ್ರಿ ಮಾಡಲು ಆಗ್ರಹ ಮಾಡಲಾಗಿದೆ. ಮಲ್ಲಿಕಾರ್ಜುನ ಖರ್ಗೆ ಮತ್ತು ಪರಮೇಶ್ವರ ರಂತಹ ಹಿರಿಯ ರಾಜಕಾರಣಿಗಳಿಗೆ ಯಾಕೆ ಮುಖ್ಯಮಂತ್ರಿ ಅವಕಾಶ ಕೊಡಲಿಲ್ಲ ಎಂಬುದನ್ನು ತಾವು ಮನಗಾಣಬೇಕು ಎಂದು ರಾಜಶೇಖರ್ ಕಿಡಿಕಾರಿದ್ದಾರೆ.

# ಗಂಗಾಮತ ಸಮಾಜದಿಂದ ಗಂಗಾ ಪರಮೇಶ್ವರಿ ಜಯಂತಿ

ದಾವಣಗೆರೆ, ಜೂ.24- ಗಂಗಾಮತ ಸಮಾಜ ಬಾಂಧವರು ಶುಕ್ರವಾರ ನಗರದಲ್ಲಿ ಶ್ರೀ ಗಂಗಾ ಪರಮೇಶ್ವರಿ ಜಯಂತಿಯನ್ನು ಶ್ರದ್ಧಾ - ಭಕ್ತಿಯಿಂದ ಆಚರಿಸಿದರು.

ಜಿಲ್ಲಾ ಗಂಗಾಮತಸ್ಥರ ಸಂಘ ಹಾಗೂ ಶ್ರೀ ಗಂಗಾಪರಮೇಶ್ವರಿ ಜಯಂತ್ಯೋತ್ಸವ ಸಮಿತಿ ವತಿಯಿಂದ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಸಮೀಪ ಪಾದಗಟ್ಟೆಯಲ್ಲಿ ಹಮ್ಮಿಕೊಂಡಿದ್ದ ಗಂಗಾ ಪರಮೇಶ್ವರಿ ಜಯಂತ್ಯೋತ್ಸವದಲ್ಲಿ ಭಕ್ತರು ಭಾಗವಹಿಸಿ ಭಕ್ತಿ ಸಮರ್ಪಿಸಿದರು.

ಮಹಾನಗರ ಪಾಲಿಕೆ ಮಹಾಪೌರರಾದ ಜಯ್ಯಮ್ಮ ಗೋಪಿನಾಯ್ಕ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸೇರಿದಂತೆ ಅನೇಕರು ಶ್ರೀ ಗಂಗಾ ಪರಮೇಶ್ವರಿ ದೇವಿಗೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿದರು.

ಜಯಂತಿ ನಿಮಿತ್ತ ಮಹಿಳೆಯರಿಂದ ಕುಂಭ ಮೇಳ ನಡೆಯಿತು. ಕುಂಭಗಳನ್ನು ಹೊತ್ತಿದ್ದ 101 ಮಹಿಳೆಯರು ದುರ್ಗಾಂಬಿಕಾ ದೇವಸ್ಥಾನದಿಂದ ಶ್ರೀ ವೀರ ಮದಕರಿ ನಾಯಕ ವೃತ್ತದವರೆಗೆ ಸಾಗಿ ಪುನೀತಭಾವ ತಾಳಿದರು.

ಈ ಸಂದರ್ಭದಲ್ಲಿ ಶ್ರೀನಿವಾಸ್ ದಾಸಕರಿಯಪ್ಪ, ಜಿಲ್ಲಾ ಗಂಗಾಮತಸ್ಥ ಸಂಘದ ಜಿಲ್ಲಾಧ್ಯಕ್ಷ ಬಿ.ಕೆ.ಮಂಜುನಾಥ್, ಕಾರ್ಯದರ್ಶಿ ಉಮೇಶ್, ಉಪಾಧ್ಯಕ್ಷ ಪುಟಗನಾಳ್ ಮಂಜುನಾಥ್, ಅಂಬಾಡಿ ನಾಗರಾಜ್, ವಾಗೀಶ್, ಚಂದ್ರಪ್ಪ, ಲಿಂಗರಾಜ್ ಹಾವನೂರು, ಗಂಗಣ್ಣ, ಗಣೇಶ್, ರವಿಕುಮಾರ್, ಬಾತಿ ಅಂಜಿನಪ್ಪ, ಕೆಂಚಪ್ಪ, ಕೋಲ್ಕುಂಟೆ ಅಶೋಕ್, ಚಂದ್ರಪ್ಪ, ಹನುಮಂತ, ದುಗ್ಗೇಶ್ ಸೇರಿದಂತೆ ಸಮಾಜದ ನೂರಾರು ಭಕ್ತರು ಉಪಸ್ಥಿತರಿದ್ದರು.



# ದವನ - ನೂತನ ಕಾಲೇಜಿನ ವಿದ್ಯಾರ್ಥಿಗಳಿಂದ ವೃದ್ಧರ ಸಮಸ್ಯೆಗಳ ಕಿರುನಾಟಕ




ದಾವಣಗೆರೆ, ಜೂ. 24- ನಗರದ ದವನ - ನೂತನ ಕಾಲೇಜಿನ ಬಿ.ಸಿ.ಎ. ದ್ವಿತೀಯ ವರ್ಷದ ವಿದ್ಯಾರ್ಥಿಗಳು ವೃದ್ಧರ ಸಮಸ್ಯೆಗಳ ಕುರಿತು ಗಮನ ಸೆಳೆಯಲು ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ನಿನ್ನೆ ಕಿರು ನಾಟಕವನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವೃದ್ಧಾಶ್ರಮಕ್ಕಾಗಿ ದೇಣಿಗೆಯನ್ನೂ ಸಂಗ್ರಹಿಸಿದರು.

ಕಾಲೇಜಿನ ಉಪನ್ಯಾಸಕರಾದ ಅರುಣ್ ಚವ್ಹಾಣ್ ಹಾಗೂ ಬಿ.ಎಸ್. ಶ್ವೇತ ಕಾರ್ಯಕ್ರಮದ ರೂವಾರಿಗಳಾಗಿದ್ದರು.

# ಇಂದು ರಾಷ್ಟ್ರತಪಸ್ವಿ ಶ್ರೀ ಗುರೂಜಿ ಪುಸ್ತಕ ಲೋಕಾರ್ಪಣೆ

ರಾಷ್ಟ್ರೋತ್ಥಾನ ಬಳಗ (ದಾವಣಗೆರೆ) ವತಿಯಿಂದ 'ರಾಷ್ಟ್ರತಪಸ್ವಿ ಶ್ರೀ ಗುರೂಜಿ' ಪುಸ್ತಕ ಲೋಕಾರ್ಪಣೆ ಸಮಾರಂಭವು ರಾಷ್ಟ್ರೋತ್ಥಾನ ಕೇಂದ್ರದ ಆವರಣದಲ್ಲಿ ಇಂದು ಸಂಜೆ 5.30 ಕ್ಕೆ ನಡೆಯಲಿದೆ. ಸರಸ್ವತಿ ನಗರದ ಸ್ವಾಮಿ ಧೃತಿಶೀಲಾನಂದ ಜೀ ಸಾನ್ನಿಧ್ಯ ವಹಿಸಿ, ಪುಸ್ತಕ ಲೋಕಾರ್ಪಣೆ ಮಾಡಲಿ ದ್ದಾರೆ. ಪುಸ್ತಕ ಕುರಿತು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣ ಶೇವಿರೆ ಮಾತನಾಡಲಿದ್ದಾರೆ.


# ನಗರದಲ್ಲಿ ನಾಳೆ ವೃದ್ಧರು, ಅಂಗವಿಕಲರಿಗೆ ಉಚಿತ ಕೀಲು-ಮೂಳೆ ತಪಾಸಣೆ

ದಾವಣಗೆರೆ, ಜೂ.24- ನಗರದ ಶ್ರೀ ಭಗವಾನ್ ಮಹಾವೀರ ಜೈನ್ ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ನುರಿತ ಕೀಲು ಮತ್ತು ಮೂಳೆ ತಜ್ಞವೈದ್ಯರಿಂದ ಉಚಿತ ತಪಾಸಣೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 26ರ ಭಾನುವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1.30 ರವರೆಗೆ ಹಮ್ಮಿಕೊಳ್ಳಲಾಗಿದೆ. ವೈದ್ಯರ ಸಲಹೆ ಮೇರೆಗೆ ಉಚಿತವಾಗಿ ಔಷಧಿ ವಿತರಣೆ, ಎಕ್ಸರೇ ಮತ್ತು ವಿಶೇಷವಾದ ವಾಕಿಂಗ್ ಸ್ಟಿಕ್ ನೀಡಲಾಗುವುದು. ವಿವರಕ್ಕೆ 96060 48423 ನ್ನು ಸಂಪರ್ಕಿಸುವಂತೆ ಆಸ್ಪತ್ರೆ ಕಮಿಟಿ ಟ್ರಸ್ಟ್‌ನ ಅಧ್ಯಕ್ಷ ಸಂಘವಿ ಮಹಾವೀರ್ ಜೈನ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ರೋಟರಿ ವಿದ್ಯಾನಗರ ಪದಾಧಿಕಾರಿಗಳ ಪದಗ್ರಹಣ

ರೋಟರಿ ಸಂಸ್ಥೆ ವಿದ್ಯಾನಗರ ಇದರ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಇಂದು ಸಂಜೆ 5 ಗಂಟೆಗೆ ನಡೆಯಲಿದೆ. ಸಂಸ್ಥೆಯ ಅಧ್ಯಕ್ಷರಾಗಿ ಸಿ.ಕೆ. ಸಿದ್ದಪ್ಪ, ಕಾರ್ಯದರ್ಶಿಯಾಗಿ ಎಸ್.ಎನ್. ಮಳವಳ್ಳಿ ಇವರು ಪದಗ್ರಹಣ ಮಾಡಲಿದ್ದಾರೆ.

# ಹಿರಿಯ ಲೇಖಕ ಡಾ. ಗುರುಲಿಂಗ ಕಾಪಸೆ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ






ನವದೆಹಲಿ, ಜೂ. 24- ಕೇಂದ್ರ ಸಾಹಿತ್ಯ ಅಕಾಡೆಮಿಯು ನೀಡುವ ಅನುವಾದ ಪುಸ್ತಕ ಪ್ರಶಸ್ತಿಗೆ ಹಿರಿಯ ಲೇಖಕರಾದ ಡಾ. ಗುರುಲಿಂಗ ಕಾಪಸೆ ಅವರು ಭಾಜನರಾಗಿದ್ದಾರೆ.

ಡಾ. ಕಾಪಸೆ ಅವರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ ವಿ.ಸ. ಖಾಂಡೇಕರ್ ಅವರ 'ಒಂದು ಪುಟದ ಕಥೆ' ಯು ಈ ಸಲದ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿಗೆ ಆಯ್ಕೆಯಾಗಿದೆ. 'ಒಂದು ಪುಟದ ಕಥೆ' (ಮೂಲದಲ್ಲಿ'ಏಕಾ ಪಾನಾಚಿ ಗೋಷ್ಠ)ಯು ಖಾಂಡೇಕರ್ ಅವರ ಆತ್ಮಕಥೆಯಾಗಿದೆ.

ಖಾಂಡೇಕರ್ ಅವರು ಮರಾಠಿಯ ಮೊದಲ ಜ್ಞಾನಪೀಠ ಪ್ರಶಸ್ತಿ ಪಡೆದ ಲೇಖಕರು. ಅವರ 'ಯಯಾತಿ ' ಎಂಬ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂದಿತ್ತು.

ಡಾ. ಕಾಪಸೆಯವರು ಅನುವಾದಿಸಿದ ಖಾಂಡೇಕರ್ ಅವರ ಆತ್ಮ ಕಥೆಯು ಕಳೆದ ಶತಮಾನದ ಭಾರತದ ಅದ ರಲ್ಲಿಯೂ ಮಹಾರಾಷ್ಟ್ರದ ಕೊಂಕಣ ಭಾಗದ ಸಾಮಾ ಜಿಕ, ಆರ್ಥಿಕ, ರಾಜಕೀಯ, ಜಾತೀಯ ಸ್ಥಿತಿಗತಿಗಳ ಸಮಗ್ರವಾದ ವಿವರಣೆ ನೀಡುತ್ತದೆ. ವಿಶೇಷವೆಂದರೆ ಖಾಂಡೇಕರ್ ಅವರು ಕರ್ನಾಟಕದ ಅದರಲ್ಲೂ ಬೆಳಗಾವಿ ಜಿಲ್ಲೆಯ ಅಳಿಯ. ಖಾನಾಪುರ ತಾಲ್ಲೂಕಿನ ಅಸೋಗಾ ಗ್ರಾಮದ ಮಣೇರಿಕರ್ ಕುಟುಂಬದ ಉಷಾ ಅವರು ಖಾಂಡೇಕರ್ ರ ಹೆಂಡತಿ. ಮದುವೆಗಾಗಿ ಅವರು ಮಹಾರಾಷ್ಟ್ರದ ರತ್ನಗಿರಿಯಿಂದ ಅಸೋಗಾ ಗ್ರಾಮದ ವರೆಗೆ ಚಕ್ಕಡಿ ಕಟ್ಟಿಕೊಂಡು ಬಂದ ವಿವರಗಳನ್ನು ಕೃತಿಯಲ್ಲಿ ನೀಡಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ವಿಭಾಗದ ಸಂಚಾಲಕರಾಗಿರುವ ಡಾ. ಸರಜೂ ಕಾಟ್ಕರ್ ಅವರ ಉಸ್ತುವಾರಿಯಲ್ಲಿ ನಡೆದ ಅನುವಾದ ಸಾಹಿತ್ಯ ಪ್ರಶಸ್ತಿ ಆಯ್ಕೆ ಸಮಿತಿಯು ಡಾ ಕಾಪಸೆ ಯವರು ಅನುವಾದಿಸಿದ ಈ ಕೃತಿಯನ್ನು ಪ್ರಶಸ್ತಿಗೆ ಆಯ್ಕೆಮಾಡಿತು.

ಆಯ್ಕೆ ಸಮಿತಿಯ ಜ್ಯೂರಿಗಳಾಗಿ ಹಿರಿಯ ಲೇಖಕರಾದ ಡಾ ಬಸವರಾಜ ಕಲ್ಗುಡಿ, ಕವಿಗಳಾದ ಬಿ.ಆರ್. ಲಕ್ಷ್ಮಣರಾವ್ ಹಾಗೂ ಡಾ. ಸುಬ್ಬು ಹೊಲಿಯಾರ್ ಅವರುಗ ಳಿದ್ದರು. ಪ್ರಶಸ್ತಿ ಪ್ರದಾನ ಸಮಾರಂಭವು ಬರುವ ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ದಿಲ್ಲಿಯಲ್ಲಿ ನೆರವೇರಲಿದೆ. ಪ್ರಶಸ್ತಿಯು 50,000 ರೂ., ಸ್ಮೃತಿ ಫಲಕ, ಶಾಲು ಸನ್ಮಾನ ಒಳಗೊಂಡಿರುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿಗೆ ಭಾಜನರಾದ ಡಾ ಕಾಪಸೆ ಅವರನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ. ಚಂದ್ರಶೇಖರ ಕಂಬಾರ, ಹಿರಿಯ ಸಾಹಿತಿ ಆರ್.ಜಿ.ಹಳ್ಳಿ ನಾಗರಾಜ್ ಅವರು ಅಭಿನಂದಿಸಿದ್ದಾರೆ.

# ಬಿಐಇಟಿ ಕಾಲೇಜಿನಲ್ಲಿ ಇಂದು ನಮ್ಮ ದವನ 2022 ಸಮಾರೋಪ

ಬಾಪೂಜಿ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಕಾಲೇಜಿನಲ್ಲಿ ನಡೆಯುತ್ತಿರುವ ನಮ್ಮ ದವನ 2022 ಕಾರ್ಯಕ್ರಮ ಇಂದು ಸಂಜೆ 6.30 ಕ್ಕೆ ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಪೃಥ್ವಿ ಶಾಮನೂರು, ಅಂಜಲಿ ಅನಿಶ್, ಮಾಳವಿಕ ಟಿ. ವಸುಪಾಲ್ ಆಗಮಿಸುವರು. ಅಧ್ಯಕ್ಷತೆಯನ್ನು ಪ್ರೊ. ವೈ. ವೃಷಭೇಂದ್ರಪ್ಪ, ಡಾ. ಎಸ್.ಎನ್. ರಮೇಶ್, ಡಾ. ಹೆಚ್.ಬಿ. ಅರವಿಂದ್ ವಹಿಸುವರು.

# ಈಶ್ವರಮ್ಮ ಶಾಲೆಯಲ್ಲಿ ಇಂದು ಪ್ರತಿಜ್ಞಾ ಸ್ವೀಕಾರ ಸಮಾರಂಭ

**ದಾವಣಗೆರೆ :** ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಪ್ರಶಾಂತಿ ಸಭಾಂಗಣದಲ್ಲಿ ಶಾಲಾ ಮಂತ್ರಿ ಮಂಡಲದ ಪ್ರತಿಜ್ಞಾ ಸ್ವೀಕಾರ ಹಾಗೂ ವಿದ್ಯಾರ್ಥಿ ಸಂಘಗಳ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ.

ಈಶ್ವರಮ್ಮ ಶಾಲಾಡಳಿತ ಮಂಡಳಿ ಅಧ್ಯಕ್ಷೆ ಕೆ.ಆರ್. ಸುಜಾತ ಕೃಷ್ಣ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಈಶ್ವರಮ್ಮ ಟ್ರಸ್ಟ್ ಕಾರ್ಯದರ್ಶಿ ಜಿ.ಆರ್. ವಿಜಯಾನಂದ್, ಈಶ್ವರಮ್ಮ ಶಾಲಾಡಳಿತ ಮಂಡಳಿ ಕಾರ್ಯದರ್ಶಿ ಎ.ಆರ್. ಉಷಾ ರಂಗನಾಥ್, ಖಜಾಂಚಿ ಎ.ಪಿ. ಸುಜಾತ ಭಾಗವಹಿಸಲಿದ್ದಾರೆ.

# ಬೆಳೆ ವಿಮೆ ಆಕ್ಷೇಪಣೆ ಸಲ್ಲಿಸಿ

ಹೊನ್ನಾಳಿ

ಹೊನ್ನಾಳಿ, ಜೂ.24- ಬೆಳೆ ವಿಮೆ ಯೋಜನೆಯಡಿಯಲ್ಲಿ ವಿಮಾ ಸಂಸ್ಥೆಯಿಂದ ತಿರಸ್ಕೃತಗೊಂಡ ಪ್ರಸ್ತಾವನೆಗಳಿಗೆ ಆಕ್ಷೇಪಣೆ ಸಲ್ಲಿಸುವ ಅವಕಾಶ ಕಲ್ಪಿಸಲಾಗಿದೆ.

ತಾಳೆಯಾಗದ ಕೆಲವೊಂದು ಪ್ರಸ್ತಾವನೆಗಳನ್ನು ಸಂಬಂಧಪಟ್ಟ ವಿಮಾ ಕಂಪನಿಯವರು ತಿರಸ್ಕರಿಸಿ ವಿಮಾ ಮೊತ್ತವನ್ನು ಜಮೆ ಮಾಡಿರುವುದಿಲ್ಲ. ಈ ರೀತಿಯಾಗಿ ಬೆಳೆ ಸಮೀಕ್ಷೆ ಹೊಂದಾಣಿಕೆ ಯಾಗದೇ ತಿರಸ್ಕೃತಗೊಂಡ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರ, ಗ್ರಾಮ ಪಂಚಾಯಿತಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿಗಳಲ್ಲಿ ಪ್ರದ ರ್ಶಿಸಲಾಗಿದೆ. ತಿರಸ್ಕೃತಗೊಂಡ ಪ್ರಸ್ತಾವನೆಗಳ ಬಗ್ಗೆ ವಿಮೆ ನೋಂ ದಾಯಿತ ರೈತರಿಗೆ ಆಕ್ಷೇಪಣೆಗಳಿ ದ್ದಲ್ಲಿ ಜುಲೈ 7 ರೊಳಗೆ ಸಲ್ಲಿಸಲು ಕೋರಿದೆ.

# ಜಯವಿಭವ ವಿದ್ಯಾಸಂಸ್ಥೆಯಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜೂ.24- ನಗರದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ, ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಆಂಗ್ಲಮಾಧ್ಯಮ, ಗುರುಬಸಮ್ಮ ವಿ. ಚಿಗಟೇರಿ ಅನುದಾನಿತ ಹಿರಿಯ ಪ್ರಾಥಮಿಕ ಹಾಗು ಶಿವಣ್ಣ ಚಿಗಟೇರಿ ನರ್ಸರಿ ಶಾಲೆಗಳ ಸಂಯುಕ್ತಾಶ್ರಯದಲ್ಲಿ ಶಾಲಾ ಆವರಣದಲ್ಲಿ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ಅಕ್ಕಮಹಾದೇವಿ ಯೋಗ ಶಾಲೆ ಶಿಕ್ಷಕರು ಹಾಗು ಯೋಗಪಟು ನಾಗರಾಜ್ ಕುರ್ಡೇಕರ್ ಅವರು ಮಕ್ಕಳಿಗೆ ಯೋಗ ಮಾಡಿಸುವುದರ ಮೂಲಕ ಜೀವನದಲ್ಲಿ ಯೋಗದ ಮಹತ್ವವನ್ನು ತಿಳಿಸಿಕೊಟ್ಟರು. ಶಿಕ್ಷಕ ಬಿ.ಕೆ. ಹನುಮಂತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕ್ಕಮಹಾ ದೇವಿ ಬಾಲಿಕಾ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಸುರೇಶ್ ನಾಯ್ಕ್ ವಹಿಸಿದ್ದರು. ಮುಖ್ಯ ಅತಿಥಿ ಗಳಾಗಿ ಸಂಸ್ಥೆಯ ಕಾರ್ಯದರ್ಶಿ ಮನೋಹರ್ ವಿ. ಚಿಗಟೇರಿ, ಸಿಐಸಿ ಎಂ.ಟಿ. ಮಳಗಿ, ಮುಖ್ಯೋಪಾಧ್ಯಾಯರಾದ ಹೆಚ್. ನಿಂಗಪ್ಪ, ಶ್ರೀಮತಿ ವೀರಮ್ಮ ಎಂ.ಎಸ್. ಉಪಸ್ಥಿತರಿದ್ದರು.

ಶಿಕ್ಷಕಿ ಶ್ರೀಮತಿ ಪುಷ್ಪ ಅವರ ಪ್ರಾರ್ಥನೆ ಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಶಿಕ್ಷಕ ಬಸವರಾಜ್ ಸುಣಗಾರ್ ಸ್ವಾಗತಿಸಿದರು. ಶಿಕ್ಷಕ ಸುರೇಶ್ ನಿರೂಪಿಸಿದರು. ಶಿಕ್ಷಕಿ ಶ್ರೀಮತಿ ಶಿವಲೀಲಾ ವಂದಿಸಿದರು. ಯೋಗ ಪಟುಗಳಾದ ಎಂ.ಎಸ್. ಜ್ಯೋತಿ, ಸೃಷ್ಟಿ ಜಿ. ಲಕ್ಕುಂಡಿ, ಕೆ.ಬಿ. ಸ್ವಪ್ನ ಅವರುಗಳು ಯೋಗ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

# ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ, ಜೂ.24- ನಗರದ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್‌ನಿಂದ ಪ್ರತಿಭಾವಂತ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ನಗದಾಗಿ ವಿದ್ಯಾರ್ಥಿ ವೇತನ ವಿತರಿಸಲಾಗುವುದು ಎಂದು ಟ್ರಸ್ಟ್‌ನ ಅಧ್ಯಕ್ಷ ಸಿ.ಆರ್. ವಿರೂಪಾಕ್ಷಪ್ಪ ತಿಳಿಸಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಮುದಾಯದ, ಶೇಕಡವಾರು 85% ರಷ್ಟು ಅಂಕ ಪಡೆದ ಪ್ರತಿಭಾವಂತ ಮಕ್ಕಳು ಅರ್ಜಿ ಸಲ್ಲಿಸಬಹುದು. 2021-22ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ವಿದಾರ್ಥಿ-ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್, ಚನ್ನಗಿರಿ ರಂಗಪ್ಪ ಗಡಿಯಾರ ಕಂಬದ ಎದುರು, ರೈಲ್ವೇ ಸ್ಟೇಷನ್ ರಸ್ತೆ, ದಾವಣಗೆರೆ-1. ಇಲ್ಲಿಗೆ ಜುಲೈ 1 ರಿಂದ 10 ರೊಳಗೆ ಸಂಪರ್ಕಿಸಬಹುದು ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಭರತ್ ಚನ್ನಗಿರಿ ತಿಳಿಸಿದ್ದಾರೆ.

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಸದರಿ ಸ್ವತ್ತಿನ ಮಾಲೀಕರಾದ ದಾವಣಗೆರೆ ಸಿಟಿ, ಎಂಸಿಸಿ 'ಎ' ಬ್ಲಾಕ್ ಆಶ್ರಯ ಆಸ್ಪತ್ರೆ ರಸ್ತೆ, ಡೋ ನಂ. 1966ರಲ್ಲಿ ವಾಸವಾಗಿರುವ ಶ್ರೀ ಕೆ. ಹರ್ಷ ರೆಡ್ಡಿ ಬಿನ್ ಕೆ. ಶ್ರೀನಾಥರೆಡ್ಡಿ ಇವರಿಂದ ಕ್ರಯಕ್ಕೆ ಪಡೆದುಕೊಳ್ಳಲು ಇಚ್ಛಿಸಿರುತ್ತಾರೆ. ಆದ ಕಾರಣ ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾರದೇ ಹಕ್ಕು/ಹಿತಾಸಕ್ತಿಗಳಿದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ 3 ದಿನಗಳೊಳಗಾಗಿ ನಮ್ಮ ಕಛೇರಿಗೆ ಲಿಖಿತವಾಗಿ ತಮ್ಮ ತಕರಾರನ್ನು ತಿಳಿಸತಕ್ಕದ್ದು, ಇಲ್ಲದಿದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾರದೂ ತಂಟೆ-ತಕರಾರು ಇಲ್ಲವೆಂದು ತಿಳಿದು ಸದರಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಾರೆ ತಿಳಿಯಿರಿ.

**ಷೆಡ್ಯೂಲ್**

ಹಾಲಿ ದಾವಣಗೆರೆ ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 34ರಲ್ಲಿ ಬರುವ ಹಾಗು ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್‌ನಲ್ಲಿ ಬರುವ ಶ್ಯಾಬನೂರು ಗ್ರಾಮದ ರೀ ಸರ್ವೆ ನಂ. 42/2ಬಿ2 ರಲ್ಲಿ ಬರತಕ್ಕ ಡೋರ್ ನಂ. 4870/ಎ ರಲ್ಲಿ ಅಳತೆ: ಪೂರ್ವ-ಪಶ್ಚಿಮ ಉತ್ತರದ ಕಡೆಗೆ 74 ಅಡಿ, 06 ಅಂಗುಲ, ದಕ್ಷಿಣದ ಕಡೆಗೆ 67 ಅಡಿ, ಉತ್ತರ-ದಕ್ಷಿಣ ಪೂರ್ವದ ಕಡೆಗೆ 112 ಅಡಿ, 06 ಅಂಗುಲ, ಪಶ್ಚಿಮದ ಕಡೆಗೆ 99 ಅಡಿ 09 ಅಂಗುಲವುಳ್ಳ ಪೂರಾ ನಿವೇಶನದ ಪೈಕಿ ಪಶ್ಚಿಮ ಭಾಗದ ಕಡೆಗೆ ಬರುವ ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ. 4870/ಎ, ಇದರ ಅಳತೆ: ಪೂರ್ವ ಪಶ್ಚಿಮ ಉತ್ತರದ ಕಡೆಗೆ 63 ಅಡಿ, 5 ಅಂಗುಲ, ದಕ್ಷಿಣದ ಕಡೆಗೆ 53 ಅಡಿ, ಉತ್ತರ-ದಕ್ಷಿಣ ಪೂರ್ವದ ಕಡೆಗೆ 110 ಅಡಿ ಪಶ್ಚಿಮದ ಕಡಗೆ 99 ಅಡಿ, 09 ಅಂಗುಲ (63.5+53)/2 x (110+99.9)/2 ಅಡಿವುಳ್ಳ ನಿವೇಶನ

ಈ ರೀತಿ ಉಳ್ಳ ಮೇಲ್ಕಂಡ (1) ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ. 3399/338/ಎ, ಇದರ ಅಳತೆ: ಪೂರ್ವ ಪಶ್ಚಿಮ ಉತ್ತದ ಕಡೆ 65 ಅಡಿ, ದಕ್ಷಿಣದ ಕಡೆಗೆ 63.5 ಅಡಿ ಉತ್ತರ -ದಕ್ಷಿಣ ಪೂರ್ವದ ಕಡೆಗೆ 12 ಅಡಿ, ಪಶ್ಚಿದ ಕಡೆ 27.5 ಅಡಿ (65+63.5) /2 x (12+27.5)/2 ವುಳ್ಳ ನಿವೇಶನ (2) ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ. 4870/ಎ, ಇದರ ಅಳತೆ: ಪೂರ್ವ-ಪಶ್ಚಿಮ ಉತ್ತರದ ಕಡೆಗೆ 63 ಅಡಿ,5 ಅಂಗುಲ ದಕ್ಷಿಣ ಕಡೆಗೆ 53 ಅಡಿ, ಉತ್ತರ ದಕ್ಷಿಣ ಪೂರ್ವದ ಕಡೆಗೆ 110 ಅಡಿ ಪಶ್ಚಿಮದ ಕಡೆ 99 ಅಡಿ, 09 ಅಂಗುಲ (63.5+53)/2 x (110+99.9)/2 ಅಡಿವುಳ್ಳ ನಿವೇಶನ ಈ ಎರಡು ನಿವೇಶನಗಳು ಒಂದಕ್ಕೊಂದು ಲಗತ್ತಿರುವುದರಿಂದ ಸದರಿ ನಿವೇಶನಗಳನ್ನು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ನಂ. ದಾಹನಪ್ರಾ/ಯೋವಿ/ನಿಜ/ಸಿಆರ್/801/2020-21/1104, ದಿನಾಂಕ 21.09.2020ರ ಪ್ರಕಾರ ನಿವೇಶನ ಒಟ್ಟು ಗೂಡಿಸುವಿಕೆ ಅನುಮತಿ ಪತ್ರವನ್ನು ಪಡೆದುಕೊಂಡಾಗ ಅಳತೆ: (19.81+16.15) x (37.18+38.78) ಮೀಟರ್ ವುಳ್ಳ ನಿವೇಶನ ಎಂಬುದಾಗಿ ಒಟ್ಟುಗೂಡಿಸಿದ್ದು, ತದ ನಂತರ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಆರ್ಡರ್ ನಂ. ದಾಮನಪಾ/ವಕ-3/ಕಂಶಾ/ಸಿಆರ್/13/20-21, ದಿನಾಂಕ 01.11.2020ರ ಆದೇಶ ಪ್ರಕಾರ ಡೋರ್ ನಂ. 4870/ಎ, ಅಳತೆ: (19.81+16.15)/2 x (37.18+38.78)/2 ಮೀಟರ್ ಎಂಬುದಾಗಿ ಖಾತೆ ನಮೂದಾಗಿದ್ದು, ಈ ರೀತಿವುಳ್ಳ ನಿವೇಶನಕ್ಕೆ ಚಕ್ಕುಬಂದಿ: ಪೂರ್ವಕ್ಕೆ : ಇದೇ ಡೋರ್ ನಂಬರ್ ಪೈಕಿ ಉಳಿದ ಜಾಗ ಪಶ್ಚಿಮಕ್ಕೆ : ಡಾ|| ಶ್ರೀಪಾದಭಟ್ ಇವರ ಸೊತ್ತು ಉತ್ತರಕ್ಕೆ: 12.20 ಮೀಟರ್ ಅಗಲದ ರಸ್ತೆ, ದಕ್ಷಿಣಕ್ಕೆ : ಶಾಬನೂರು ಗ್ರಾಮದ ರಿ. ಸರ್ವೆ ನಂ. 42/2ಬಿ1ರ ಪ್ರದೇಶ, ಈ ಮಧ್ಯದ ನಿವೇಶನ ಕ್ರಯಕ್ಕೆ ಒಳಪಟ್ಟಿರುತ್ತದೆ.

ವಿಳಾಸ : **ವಿ. ರವಿಕುಮಾರ್,** ವಕೀಲರು
# 1700/2, 18ನೇ ಕ್ರಾಸ್, ಕೆ.ಟಿ.ಜೆ. ನಗರ ದಾವಣಗೆರೆ.
**ಮೊ: 98453 30045**

# 'ಅನುಶರಣ್ ಆ್ಯಂಪಿಯರ್' ಎಲೆಕ್ಟ್ರಿಕ್ ಸ್ಕೂಟರ್ ಶೋ ರೂಂ ಪ್ರಾರಂಭ



ದಾವಣಗೆರೆ, ಜೂ. 24- ನಗರದ ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಪಕ್ಕ ಎಲೆಕ್ಟ್ರಿಕ್ ಸ್ಕೂಟರ್‌ಗಳ ಶೋ ರೂಂ 'ಅನುಶರಣ ಆ್ಯಂಪಿಯರ್' ಶುಕ್ರವಾರ ಲೋಕಾರ್ಪಣೆಗೊಂಡಿತು.

ಆ್ಯಂಪಿಯರ್ ಕಂಪನಿ (ದಕ್ಷಿಣ-ಉತ್ತರ) ವಿಭಾಗದ ಮುಖ್ಯಸ್ಥ ಎಸ್. ಪ್ರಾಣೇಶ್ ಮಾತನಾಡಿ, ಕಂಪನಿಯ ಸ್ಕೂಟರ್‌ಗಳು ಪರಿಸರ ಸ್ನೇಹಿಯಾಗಿದ್ದು, ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಸಿಗಲಿವೆ. ಸ್ಥಳೀಯ ಹಾಗೂ ಸುತ್ತಮುತ್ತಲಿನ ಗ್ರಾಹಕರು ಈ ವಾಹನ ಖರೀದಿಸಿ,ದಾವಣಗೆರೆಯನ್ನು ಸ್ವಚ್ಛ ಮತ್ತು ಹಸಿರು ನಗರವನ್ನಾಗಿಡಲು ಸಹಕರಿಸುವಂತೆ ಮನವಿ ಮಾಡಿದರು.

ಪ್ರಧಾನ ವ್ಯವಸ್ಥಾಪಕ ಸುಹಾನ್ ಮಾತನಾಡಿ, ಪೆಟ್ರೋಲ್ ಬೆಲೆ ಹೆಚ್ಚಳ ಆದಾಗಿನಿಂದ ಎಲೆಕ್ಟ್ರಿಕ್ ವಾಹನಗಳಿಗೆ ಬೇಡಿಕೆ ಬಂದಿದೆ. ಅವುಗಳನ್ನು ಬಳಸುವ ಮೂಲಕ ಮುಂದಿನ ಪೀಳಿಗೆಗೆ ಸ್ವಚ್ಛ ಪರಿಸರವನ್ನು ಉಳಿಸಬೇಕಾಗಿದೆ ಎಂದರು.

ಅನುಶರಣ ಆ್ಯಂಪಿಯರ್ ವ್ಯವಸ್ಥಾಪಕ ನಿರ್ದೇಶಕ ಅರುಣ್ ಮಾತನಾಡಿದರು. ಕಂಪನಿಯ ಮಾರಾಟ ವಿಭಾಗದ ರಾಜ್ಯ ಘಟಕದ ಮುಖ್ಯಸ್ಥ ಎ.ಎನ್. ಪ್ರೀತಮ್ ಕುಮಾರ್, ಸರ್ವೀಸ್ ಮ್ಯಾನೇಜರ್ ಟಿ. ಶಿವಾ, ಅನುಶರಣ ಆ್ಯಂಪಿಯರ್ ಮಾಲೀಕರಾದ ಅನ್ನಪೂರ್ಣಮ್ಮ, ಮ್ಯಾನೇಜಿಂಗ್ ಡೈರೆಕ್ಟರ್‌ಗಳಾದ ಪ್ರವೀಣ್, ಕಿರಣ್, ದಾವಣಗೆರೆ ಶಾಖೆಯ ಮುಖ್ಯಸ್ಥ ಅಣ್ಣಾರಾವ್ ಕುಲಕರ್ಣಿ, ಮಾರಾಟ ವ್ಯವಸ್ಥಾಪಕ ಶ್ರೀಕಾಂತ್, ಶಶಿಕಾಂತ್ ಮತ್ತಿತರರಿದ್ದರು.

# ನಗರದಲ್ಲಿ ಇಂದು ಸರ್ಕಾರಿ ನಿವೃತ್ತ ನೌಕರರ ಸಂಘದ ಚುನಾವಣೆ

ದಾವಣಗೆರೆ, ಜೂ. 24- ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಆಡಳಿತ ಮಂಡಳಿಯ ಚುನಾವಣೆ ನಗರದ ಕುವೆಂಪು ಕನ್ನಡ ಭವನದಲ್ಲಿ ನಾಳೆ ದಿನಾಂಕ 25 ರಂದು ನಡೆಯಲಿದೆ ಎಂದು ಹಿರಿಯ ತಜ್ಞ ಡಾ. ಹೆಚ್.ಎಂ. ವೀರಯ್ಯ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಸಂಘದಲ್ಲಿ ಬದಲಾವಣೆ ತರುವ ಉದ್ದೇಶದಿಂದ ಡಾ.ಹೆಚ್.ಎಂ. ವೀರಯ್ಯ ಗುಂಪು ಸ್ಪರ್ಧೆಗಿಳಿದಿದೆ. ಈ ಗುಂಪು ಅಧಿಕಾರಕ್ಕೆ ಬಂದರೆ ಒಬ್ಬ ಸದಸ್ಯ ಎರಡು ಬಾರಿ ಮಾತ್ರ ಚುನಾವಣೆಗೆ ಸ್ಪರ್ಧಿಸುವ ಅವಕಾಶ ನೀಡುವುದು ಸೇರಿದಂತೆ ಕೆಲವು ಪ್ರಮುಖ ಅಂಶಗಳನ್ನು ಬೈಲಾ ತಿದ್ದುಪಡಿ ಮಾಡಲಾಗುವುದು ಎಂದು ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎಸ್.ಎಂ. ವೀರಯ್ಯ, ಬಿ.ಕೆ. ರೇಣುಕಾಮೂರ್ತಿ, ಎ.ಡಿ. ತಿಪ್ಪೇಸ್ವಾಮಿ, ಮೋಹನ್ ಕುಮಾರ್, ಪ್ರೊ.ಯು. ಗುರುಸ್ವಾಮಿ, ಮರಿಗೌಡರ್, ಸುಧಾಕರ್, ಬಸವರಾಜ್ ಗಡ್ಡದ ಮನಿ ಮತ್ತಿತರರಿದ್ದರು.

# ನಗರದಲ್ಲಿ ಇಂದು

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಇಂದು ಶೃಂಗ ವಾರ್ಷಿಕ ದಿನಾಚರಣೆಯನ್ನು ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಮಾತಾ ಮಂಜಮ್ಮ ಜೋಗಿಹಟ್ಟಿ, ಜೆಐಟಿ ಅಧ್ಯಕ್ಷ ಅಚಲ್ ಚಂದ್ ಭಾಗವಹಿಸಲಿದ್ದಾರೆ ಎಂದು ಪ್ರಾಂಶುಪಾಲ ಡಾ. ಗಣೇಶ್ ಡಿ.ಬಿ. ತಿಳಿಸಿದ್ದಾರೆ.

ಹೈದ್ರಾಬಾದ್ ಪ್ರಸಿದ್ಧ ಮೀನಿನ ಔಷಧಿ
ಹೈದರಾಬಾದ್ ಪ್ರಸಿದ್ಧ ಮೀನಿನ ಔಷಧಿ ಅಸ್ತಮಾ, ಉಬ್ಬಸ, ಸ್ವಾಸ, ಸೈನಸ್, ಧೂಳು ಅಲರ್ಜಿ, ರೋಗಿಗಳಿಗೆ ಅಮೃತ ಸಮಾನ ದಿವ್ಯ ಔಷಧಿ ಜೀವಂತ ಮೀನಿನ ಮೂಲಕ ಹಾಗೂ ಸಸ್ಯಹಾರಿಗಳಿಗೆ ಬಾಳೆಹಣ್ಣಿನ ಮೂಲಕ ಕೊಡಲಾಗುವುದು.
26-06-2022 ಭಾನುವಾರ ಒಂದು ದಿನ ಮಾತ್ರ ಬೆಳಿಗ್ಗೆ 8 ರಿಂದ ಮ.3 ರವರೆಗೆ
ಶ್ರೀ ನಂದಿಲಾಡ್ಜ್ ಹಳೇ ಬಸ್-ಸ್ಟಾಂಡ್ ಎದುರು, ದಾವಣಗೆರೆ-2
ಫೋನ್ : 08192-258163
ಮೊ : 09440 046047

SCIENCE ACADEMY (R.)
(A UNIQUE CENTRE FOR P.U. CLASSES)
# 307/2B, 1 FLOOR, 2nd MAIN, P.J. EXTN, NEAR STADIUM, DAVANGERE-4
SUPPLEMENTRY TUTIONS
FOR
II PUC (PCMB)
Classes Starts from 27th JUNE 2022
For more Details Contact :
Mobile : 99803 68779, 94481 78087

Repco Home Finance We Value Your Dream
ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್
CIN No. L65922TN2000TLC044655
ಫೋ : 08192-232836, ಮೊ : 9342440967, 9901009929, 7676823234, 9036368349, 9844371162
ಗೃಹ ಸಾಲ ಮೇಳ
ಸರಳ ವಿಧಾನದಲ್ಲಿ ಸಾಲ ಮಂಜೂರಾತಿ
ದಿ : 24-06-2022 ಶುಕ್ರವಾರ ಮತ್ತು ದಿ: 25-06-2022 ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 5 ರ ವರೆಗೆ
ಸ್ಥಳ : ನಂ. 78-7ಎ, ಮೊದಲನೇ ಮಹಡಿ, ನೀಲ್‌ಕಮಲ್ ಫರ್ನಿಚರ್ ಶೋ ರೂಂ ಪಕ್ಕ ರೈತರಬೀದಿ, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜ್ ರಸ್ತೆ, ದಾವಣಗೆರೆ - 577 002.
ಈ ಕೆಳಕಂಡ ಸಾಲಗಳಿಗೆ ಮಂಜೂರಾತಿ ನೀಡಲಾಗುವುದು :
★ ಖಾಲಿ ನಿವೇಶನ /ಮನೆ/ಫ್ಲಾಟ್ ಖರೀದಿಸಲು
★ ಮನೆ / ವಾಣಿಜ್ಯ ಕಟ್ಟಡ ಕಟ್ಟಲು
★ ಮನೆ ನವೀಕರಣಕ್ಕೆ
★ ಹೆಚ್ಚಿನ ಬಡ್ಡಿದರದ ಅಸ್ತಿತ್ವದಲ್ಲಿರುವ ಸಾಲವನ್ನು ಕಡಿಮೆ ಬಡ್ಡಿಗೆ ವರ್ಗಾಯಿಸಲು ಹಾಗೂ ಹೆಚ್ಚುವರಿ ಸಾಲ ಪಡೆಯಲು
★ ಅಡಮಾನ ಸಾಲ
ಆಕರ್ಷಕ ಬಡ್ಡಿ ದರ ಗೃಹ ಸಾಲ 7.45%★ ರಿಂದ ಪ್ರಾರಂಭ
ಆಡಳಿತಾತ್ಮಕ ಶುಲ್ಕದಲ್ಲಿ ಸಂಪೂರ್ಣ ಮನ್ನಾ ಸಂಸ್ಕರಣ ಶುಲ್ಕದಲ್ಲಿ ಶೇ. 0.50 % ವಿಶೇಷ ರಿಯಾಯಿತಿ
★ಷರತ್ತುಗಳು ಅನ್ವಯಿಸುತ್ತವೆ
ಆದಾಯ ಪತ್ರ ಹಾಗೂ ಆಸ್ತಿಯ ವಿವರಗಳೊಂದಿಗೆ ಭೇಟಿ ನೀಡಿ.



# ಅಗಲಿದ ಗೆಳೆಯನಿಗೆ ಭಾವಪೂರ್ಣ ಶ್ರದ್ಧಾಂಜಲಿ

**ಬದುಕೊಂದು ದೊರಕಿತ್ತು ಇನ್ನಾರಿಗೋ ಬೆಳಕಾಗಲೆಂದು**
**ಬೆಳಕು ಬೀರಿದ ನಂತರ ನಡೆದ ಭುವಿಗೆ ಹೊರೆಯಾಗದಿರಲೆಂದು**

ದಿನಾಂಕ: 17-06-2022 ರಂದು ಹೃದಯಾಘಾತಕ್ಕೆ ತುತ್ತಾಗಿ ನಮ್ಮನ್ನಗಲಿದ
ಮಲೇಬೆನ್ನೂರಿನ ನಮ್ಮೆಲ್ಲರ ಆತ್ಮೀಯ ಗೆಳೆಯ,
ಮಾನವತೆಯ ಮೇರು ಶಿಖರ, ಪ್ರಖರ ಹಿಂದುತ್ವ ಪ್ರತಿಪಾದಕ,
ಹಿಂದು ರಾಷ್ಟ್ರದ ಕನಸುಗಾರ

## ಜೆ.ಎಂ. ಮಂಜುನಾಥಸ್ವಾಮಿಗೆ

ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

## ಗೆಳೆಯ ಮತ್ತೊಮ್ಮೆ ಹುಟ್ಟಿ ಬಾ.....

### ದುಃಖತಪ್ತರು

ಶ್ರೀ ಎಸ್.ಕರಿಬಸಪ್ಪ, ಅಧ್ಯಕ್ಷರು, ಗೆಳೆಯರ ಬಳಗ ಸಾಂಸ್ಕೃತಿಕ ಕಲಾ ವೇದಿಕೆ, ಮಲೇಬೆನ್ನೂರು.
ಶ್ರೀ ಸಿ.ಹೆಚ್.ದೇವರಾಜ್, ಸಂಸದರ ಆಪ್ತ ಸಹಾಯಕರು, ದಾವಣಗೆರೆ.
ಶ್ರೀ ಡಿ.ಉಜ್ಜೇಶ್. ಶ್ರೀ ಸಿದ್ದೇಶ್ವರ ಪ್ರಾವಿಜನ್ ಸ್ಟೋರ್ಸ್, ಮಲೇಬೆನ್ನೂರು.
ಶ್ರೀ ಸಿ.ಹೆಚ್.ರವಿ, ಅಮೃತ ಕನ್ಸಟ್ರಾಕ್ಷನ್ಸ್ ಬೆಂಗಳೂರು.
ಶ್ರೀ ಎಸ್. ಪಾನಿಪುರಿ ರಂಗನಾಥ್, ಮಲೇಬೆನ್ನೂರು.
ಶ್ರೀ ಓ.ಜಿ.ಧನಂಜಯ, ಓ.ಜಿ.ಆಟೋಮೋಬೈಲ್ಸ್, ಮಲೇಬೆನ್ನೂರು.
ಶ್ರೀ ಕೆ.ಸಿ.ಚಿದಾನಂದ, ಗುತ್ತಿಗೆದಾರರು, ಮಲೇಬೆನ್ನೂರು.
ಶ್ರೀ ಕರೇಗೌಡ್ರ ರಂಗನಾಥ್, ಶಿವ ಬ್ಯಾಂಕ್ ನಿರ್ದೇಶಕರು, ಮಲೇಬೆನ್ನೂರು.
ಶ್ರೀ ಜಿ.ಎನ್.ವಿಜಯ್ ಕುಮಾರ್, ಗುತ್ತಿಗೆದಾರರು. ಮಲೇಬೆನ್ನೂರು.
ಶ್ರೀ ದೊರೆಸ್ವಾಮಿ, ಹೂವಿನ ವ್ಯಾಪಾರಿಗಳು, ಮಲೇಬೆನ್ನೂರು.
ಶ್ರೀ ರವಿ. ಪ್ರಧಾನಮಂತ್ರಿ ಜನೌಷಧಿ ಕೇಂದ್ರ, ಮಲೇಬೆನ್ನೂರು.
ಶ್ರೀ ಬೆಣ್ಣೆಹಳ್ಳಿ ಬಸವರಾಜ್, ಎಸ್.ಡಿ.ಎಂ.ಸಿ ಸದಸ್ಯರು, ಮಲೇಬೆನ್ನೂರು.
ಶ್ರೀ ಬೆಣ್ಣೆಹಳ್ಳಿ ವಿಜಯ್‌ಕುಮಾರ್, ಮಲೇಬೆನ್ನೂರು.
ಶ್ರೀ ಬೆಣ್ಣೆಹಳ್ಳಿ ಸತೀಶ್, ಮಲೇಬೆನ್ನೂರು.

ಶ್ರೀ ಪರಮೇಶ್ವರಪ್ಪ, ಪಾಪಣ್ಣಿ ಬೀಡಾ ಸ್ಟಾಲ್, ಮಲೇಬೆನ್ನೂರು.
ಶ್ರೀ ಮಂಜುನಾಥ್, ಬುಕ್‌ಸ್ಟಾಲ್, ಮಲೇಬೆನ್ನೂರು.
ಶ್ರೀ ಹುಳ್ಳಳ್ಳಿ ಸಿದ್ದೇಶ್, ಜಮೀನ್ದಾರರು, ಮಲೇಬೆನ್ನೂರು.
ಶ್ರೀ ಬೆಣ್ಣೆಹಳ್ಳಿ ಸಿದ್ದೇಶ್, ಸದಸ್ಯರು, ಪುರಸಭೆ, ಮಲೇಬೆನ್ನೂರು.
ಶ್ರೀ ಉಡೇದರ ಸಿದ್ದೇಶ್, ಜಮೀನ್ದಾರರು, ಮಲೇಬೆನ್ನೂರು.
ಶ್ರೀ ಕುಬೇರಗೌಡ್ರು, ಗಾರ್ಮೆಂಟ್ಸ್ ಮಾಲಿಕರು, ಮಲೇಬೆನ್ನೂರು.
ಶ್ರೀ ಸೊಪ್ಪಿನ ಮಂಜಣ್ಣ, ಮಲೇಬೆನ್ನೂರು.
ಶ್ರೀ ಪುಟ್ಟಸ್ವಾಮಿ, ಮಲೇಬೆನ್ನೂರು.
ಶ್ರೀ ಜೊಳ್ಳೆ ಸುರೇಶ್, ಮಲೇಬೆನ್ನೂರು.
ಶ್ರೀ ರಾಮಣ್ಣ, ಕೊಮಾರನಹಳ್ಳಿ.
ಶ್ರೀ ಸಾಮಿಲ್ ದಿನೇಶ್, ಮಲೇಬೆನ್ನೂರು.
ಶ್ರೀ ಹನುಮೇಶ್ (ಬಾಬು), ನಿರ್ಮಲ ಮೆಡಿಕಲ್ಸ್, ಮಲೇಬೆನ್ನೂರು.
ಶ್ರೀ ಈಶ್ವರಪ್ಪ, ಯಲವಟ್ಟಿ.
ಶ್ರೀ ಎಂ.ಬಿ.ಬಸವರಾಜ್, ಯಲವಟ್ಟಿ.

ಶ್ರೀ ಕಾಳವ್ವರ ಸಿದ್ದಣ್ಣ, ಯಲವಟ್ಟಿ.
ಶ್ರೀ ಶೇಖರಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಯಲವಟ್ಟಿ.
ಶ್ರೀ ಎನ್.ಎಂ.ಪಾಟೀಲ್, ಗುತ್ತಿಗೆದಾರರು, ಜಿಗಳಿ.
ಶ್ರೀ ಜಿ.ಪಿ.ಮಂಜುನಾಥ, ಗುತ್ತಿಗೆದಾರರು, ಜಿಗಳಿ.
ಶ್ರೀ ಬಿ.ಆರ್.ಮಲ್ಲಯ್ಯ, ವಡೆಯರ ಬಸವಾಪುರ.
ಶ್ರೀ ವಿಜಯ್‌ಕುಮಾರ್, ವಡೆಯರ ಬಸವಾಪುರ.
ಶ್ರೀ ಕರಿಬಸಣ್ಣ, ವಡೆಯರ ಬಸವಾಪುರ.
ಶ್ರೀ ರಂಗನಾಥ್, ಹರಳಹಳ್ಳಿ.
ಶ್ರೀ ಗಣೇಶ್, ಹರಳಹಳ್ಳಿ.
ಶ್ರೀ ಶ್ರೀನಿವಾಸ್, ಗ್ರಾಮ ಪಂಚಾಯತಿ ಸದಸ್ಯರು, ಹರಳಹಳ್ಳಿ.
ಶ್ರೀ ಹೊರಟ್ಟಿ ಮಂಜುನಾಥ್, ಕುಂಬಳೂರು.
ಶ್ರೀ ಸಂತೋಷ್, ಕುಂಬಳೂರು.
ಶ್ರೀ ನಿರಂಜನಮೂರ್ತಿ, ಕುಂಬಳೂರು.
ಶ್ರೀ ಶಂಭು, ಕುಂಬಳೂರು.

**ಗೆಳೆಯರ ಬಳಗ ಸಾಂಸ್ಕೃತಿಕ ಕಲಾ ವೇದಿಕೆಯ ಸರ್ವ ಸದಸ್ಯರು, ಮಲೇಬೆನ್ನೂರು ಗ್ರಾಮಾಂತರ.**

---

# ಮತ್ತೆ ಹುಟ್ಟಿ ಬಾ ಗೆಳೆಯ...



ಮಲೇಬೆನ್ನೂರು ಪಟ್ಟಣದ ವಾಸಿ ನಿವೃತ್ತ ಮುಖ್ಯ ಶಿಕ್ಷಕರಾದ
ಶ್ರೀ ಹೆಚ್. ಕೊಟ್ರಬಸಯ್ಯನವರ ದ್ವಿತೀಯ ಪುತ್ರ ಹಾಗೂ
ಉತ್ಸಾಹಿ ಯುವ ಮುಖಂಡರೂ, ಪ್ರಥಮ ದರ್ಜೆ ಗುತ್ತಿಗೆದಾರರೂ ಆದ
ನಮ್ಮೆಲ್ಲರ ನೆಚ್ಚಿನ ಗೆಳೆಯ

## ಶ್ರೀ ಜೆ.ಎಂ. ಮಂಜುನಾಥ ಸ್ವಾಮಿ

ಅವರ ಅಗಲಿಕೆ ನಮಗೆ ತೀವ್ರ ದುಃಖ ಹಾಗೂ ಆಘಾತ ತಂದಿದೆ.

**ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ,**

ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ಹಾಗೂ ಬಂಧು-ಮಿತ್ರರಿಗೆ ನೀಡಲೆಂದು ಪ್ರಾರ್ಥಿಸುತ್ತೇವೆ.
ಮೃತರ ಆತ್ಮಶಾಂತಿಗಾಗಿ

**"ಗುರು-ಲಿಂಗ-ಜಂಗಮಾರಾಧನೆ "ಯನ್ನು**

ದಿನಾಂಕ : 25.06.2022ರ ಶನಿವಾರ ಬೆಳಿಗ್ಗೆ 10.00 ಗಂಟೆಗೆ
ನಂ, 875/3/91, 1ನೇ ಮೇನ್, 5ನೇ ಕ್ರಾಸ್, ಜಯನಗರ 'ಸಿ' ಬ್ಲಾಕ್ ಭಗೀರಥ ಸರ್ಕಲ್
ಹತ್ತಿರ, ದಾವಣಗೆರೆಯಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು, ತಾವುಗಳು
ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ಜಿ.ಎಂ. ವಾಗೀಶ್‌ಸ್ವಾಮಿ,** ಮಲೇಬೆನ್ನೂರು
ಮಾಜಿ ಸದಸ್ಯರು, ಜಿ.ಪಂ. ದಾವಣಗೆರೆ.

**ಸಿ.ಹೆಚ್. ರವಿ,** ವಿನಾಯಕ ನಗರ ಕ್ಯಾಂಪ್
ಬೃಂದಾವನ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

**ಸರ್ವ ಸದಸ್ಯರು, ಸಾಂಸ್ಕೃತಿಕ ಗೆಳೆಯರ ಬಳಗ, ಮಲೇಬೆನ್ನೂರು ಮತ್ತು ಬಂಧು-ಮಿತ್ರರು**

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte